ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನೋಡಿದರೆ ಈಗಾಗಲೇ ಈ ಯೋಜನೆ ಪೂರೈಕೆಯಾದರೂ ಹಳ್ಳಿಯ ಜನಕ್ಕೆ ಏನೂ ಸಿಕ್ಕದಂತಾಗಿದೆ. ಸಾಧಾರಣವಾಗಿ ಹಳ್ಳಿಗಳಲ್ಲಿರುವ ಜನರ ಲೆಕ್ಕ ನೋಡಿದರೆ ನೂರಕ್ಕೆ ಎಂಬತ್ತು ಪಾಲು ಜನ ಹಳ್ಳಿಯಲ್ಲಿದ್ದಾರೆ. ಹೀಗಿದ್ದರೂ ಇವರಿಗಾಗಿ ಬಡ್ಜೆಟ್ಟಿನಲ್ಲಿ ಸಿಕ್ಕಿರುವ ಹಣ ಸಾಧಾರಣವಾಗಿ 16 ಕೋಟಿ ರೂಪಾಯಿಗಳು ಎಂದು ಇಲ್ಲಿ ಕಾಣುತ್ತದೆ. ಈ ರೀತಿಯಾಗಿ ಹಳ್ಳಿಗಳನ್ನು ಪುನರ್ವ್ಯವಸ್ಥೆ ಮಾಡಿ ಸುಧಾರಿಸದೆ ಇರುವುದು ತುಂಬಾ ಶೋಚನೀಯ ಸಂಗತಿ. ಈ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸ್ಥಿತಿ ಕೂಡ ಸಾಕಾದಷ್ಟು ಆಗಿಲ್ಲ. ನ್ಯಾಷನಲ್ ವಾಟರು ಸಪ್ಲೈ ಸ್ಕೀಮು ಎನ್ನುವಂತೆ ಮೈಸೂರು ಸರ್ಕಾರದವರು ಒಂದು ಸ್ಕೀಮನ್ನು ನಮ್ಮ ಕಡೆ ಹಳ್ಳಿಗಳಿಗೆ ಹಾಕಬಹುದಾಗಿತ್ತು. ಈವರೆಗೆ ಅದನ್ನು ತೆಗೆದುಕೊಳ್ಳದೆ ಈ ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆ ಇನ್ನೂ ಆಗದೆ ಹಾಗೆಯೇ ಇದೆ. ಅದೂ ಅಲ್ಲದೆ ನಮ್ಮ ಹಳ್ಳಿಗಳಲ್ಲಿ ಜನರ ಜೀವನ ಹೇಗಿದೆ ಎಂದರೆ ಗ್ರಾಮದಲ್ಲಿ ಅವರಿಗೆ ಕೊಡಲಿಕ್ಕೆ ಊಟ ಮಾಡಲಿಕ್ಕೆ ಎರಡು ರೂಂಗಳಿರುತ್ತವೆ. ಅದರೊಳಗೇ ಎಲ್ಲ ಕೆಲಸಕಾರ್ಯಗಳನ್ನೂ ಮಾಡಬೇಕಾಗಿದೆ. ಇಲ್ಲಿ ಹೇಗೆ ಕೂಡಬೇಕು, ಅವರು ಯಾವ ರೀತಿಯಾಗಿ ಜೀವನ ನಡೆಸಬೇಕು ಎನ್ನುವುದು, ಇದು ಬಲು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಬಗೆಹರಿಸಬೇಕಾದರೆ ಹಳ್ಳಿಗಳ ಬಡಾವಣೆಯನ್ನು ಸರಕಾರ ಶೀಘ್ರಾಗಿ ಮಾಡಬೇಕು. ಲ್ಯಾಂಡು ಅಕ್ವಿಜಿಷನ್ನು ಆಕ್ಟಿನ ಪ್ರಕಾರ ಎಷ್ಟೋ ಕೇಸುಗಳು ತೀರ್ಮಾನವಾಗದೆ ಸರಕಾರದವರಲ್ಲಿ ಇಲ್ಲೇ ತಡೆದು ನಿಂತುಹೋಗಿವೆ. ಇನ್ನು ಹೊಸ ಪಂಚಾಯಿತಿ ಆಕ್ಟಿನ ಪ್ರಕಾರ ಹಳ್ಳಿಗಳ ಬಡಾವಣೆಯನ್ನು ಮೊದಲು ಒಂದು ಯೋಜನೆಯನ್ನು ಮಾಡಿಕೊಂಡು ಮಾಡುವುದು ಅತ್ಯವಶ್ಯಕ, ಮತ್ತು ಈ ಪ್ರಕಾರ ಸರಕಾರ ಮಾಡುವುದು ಸೂಕ್ತವಾಗಿದೆ ಎಂದು ನಾನಿಲ್ಲಿ ಸೂಚಿಸುತ್ತೇನೆ.

ಇದೂ ಅಲ್ಲದೆ ಹಳ್ಳಿಗಳಲ್ಲಿ ಶಾಲೆಗಳನ್ನು ನಡೆಸಲು ಸರಿಯಾದ ಕಟ್ಟಡಗಳಿಲ್ಲ. ಬಡ್ಜೆಟ್ಟನಲ್ಲಿ ಸುಮಾರು 12 ಲಕ್ಷದಷ್ಟು ಒದಗಿಸಿದ್ದಾರೆ. ಇದರಲ್ಲಿ ಸುಮಾರು 45,000 ಹಳ್ಳಿಗಳಿರುವ ಶಾಲೆಗಳಲ್ಲಿ ತೆಗೆದುಕೊಂಡರೆ ಅನೇಕ ಶಾಲೆಗಳಿಗೆ ಕಟ್ಟಡಗಳಿಗಾಗಿ ಹಣವನ್ನು ಕೊಡಲು ಸಿಕ್ಕುವುದಿಲ್ಲ. ಈ ರೀತಿ ಹಣ ಸಿಕ್ಕದೆ ಇರುವುದರಿಂದ ತೊಂದರೆಯಾಗಿದೆ. ಈಗಾಗಲೇ ಎರಡನೇ ಯೋಜನೆ ಮುಗಿಯಲಿಕ್ಕೆ ಬಂದಿದೆ, ಇನ್ನು ರಾಷ್ಟ್ರೀಯ ಸಾಮುದಾಯಿಕ ಯೋಜನೆಯೂ ಕೂಡ ಮುಗಿಯುತ್ತಿದೆ ಮತ್ತು ನ್ಯಾಷನಲ್ ಅಭಿವೃದ್ಧಿ ಯೋಜನೆ ಮತ್ತು ಇನ್ನಿತರ ಯೋಜನೆಗಳಲ್ಲಿಯೂ ಅವಕಾಶವಿರುವುದು ಕಡಿಮೆ. ಹೀಗೆ ಇಲ್ಲಿನ ಸ್ಥಿತಿ ಹಾಗೇ ಉಳಿದಿದೆ.

ಇದೇ ಪ್ರಕಾರ ಹಳ್ಳಿಯ ರೈತರಿಗೆ ಸಾಲ ಕೂಡ ಸರಿಯಾಗಿ ಸಿಗದಂತೆಯಾಗಿ ಇದು ಒಂದು ದೊಡ್ಡ ಸಮಸ್ಯೆಯಾಗಿ ನಿಂತಿದೆ. ಈಗಾಗಲೇ ಮಾನ್ಯ ಬಸನ್ ಗೌಡರು ಹೇಳಿದಹಾಗೆ ಅಲ್ಲಿ ಬರಗಾಲ ಪ್ರದೇಶದೊಳಗೆ ಒಂದೇ ವರ್ಷದೊಳಗೇನೇ ಸೆಂಟು ಪರ್ಸೆಂಟು ರಿಕವರಿಯನ್ನು ಮಾಡಬೇಕೆಂದು ಯೋಜನೆ ಮಾಡಿದ್ದಾರೆ. ಇದೂ ಅಲ್ಲದೆ ನಮ್ಮ ಸ್ಟೇಟು ಅಪೆಕ್ಸ್ ಬ್ಯಾಂಕಿನವರು ಅಲ್ಪಕಾಲಾವಧಿ ಸಾಲವನ್ನು ಒಮ್ಮೆಯೇ ವಾಪಸು ಕೊಡುವ ಯೋಜನೆ ಮಾಡಬೇಕು ಎನ್ನುವ ಒಂದು ನಿಯಮವನ್ನು ಹಾಕಿದ್ದಾರೆ. ಇದರಲ್ಲಿ ಯಾವ ತಾಲ್ಲೂಕಿನಲ್ಲಿಯಾಗಲೀ, ಯಾವ ಜಿಲ್ಲೆಯಲ್ಲಾಗಲಿ ಹಣ ಕೊಟ್ಟಿದ್ದರೂ ಅವರಿಗೆ ತಿರುಗಿ ವಾಪಸು ಕೊಡಲು ಆಗುವುದಿಲ್ಲ. ಹೀಗಿರುವ ಹಳ್ಳಿಗಳು ಸುಮಾರು ನೂರಕ್ಕೆ ಎಂಬತ್ತರಷ್ಟು ಇವೆ. ಅಲ್ಲದೆ ಹಳ್ಳಿಗಳಲ್ಲಿರುವ ಸಹಕಾರ ಸಂಘ

(ಶ್ರೀ ಎಫ್. ಪಾಟೀಲ್)

ಗಳಲ್ಲಿ ಸದಸ್ಯರಾಗಿದ್ದರೆ, ಅವರಿಗೆ ಅಲ್ಲಿ ಸಾಲ ಸಿಗುವಂತಿಲ್ಲ. ಹೀಗಾಗಿ ಸಾವಿರಾರು ಸಹಕಾರ ಸಂಘಗಳು ಇದ್ದರೂ ಕೂಡ ನಮ್ಮ ಒಕ್ಕಲು ಮಾಡುವ ಜನಕ್ಕೆ ಸಾಲ ದೊರೆಯುತ್ತಿಲ್ಲ. ಮತ್ತು ತಕ್ಕ ಫಲ ಸಿಗುತ್ತಿಲ್ಲ. ಗ್ರಾಮಗಳಲ್ಲಿ ಉಳುಮೆ ಮಾಡುವ ಜನಕ್ಕೆ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಅವನಿಗೆ ಬೇಕಾದ ಉಪಕರಣಗಳು ಇತ್ಯಾದಿಗಳಿಗೆ ಸರಿಯಾಗಿ ಸಾಲ ದೊರೆಯದೆ ಇರುವುದರಿಂದ ಈ ಬಗ್ಗೆ ಸರಕಾರದವರು ತೀವ್ರಾಸಕ್ತಿಯಿಂದ ಇದನ್ನು ಪರಿಶೀಲಿಸಬೇಕೆಂದು ಇಲ್ಲಿ ನಾನು ಸೂಚಿಸುತ್ತೇನೆ. ಇದೂ ಅಲ್ಲದೆ ಗ್ರಾಮಾಂತರ ಪರಿಶೀಲನಾ ಸಮಿತಿಯವರ ಒಂದು Agricultural Credit Stabilisation Fund ಎನ್ನುವಂತಹ ಸ್ಕೀಮೊಂದು ಇದೆ. ಇದರಂತೆ ಪ್ರತಿಯೊಂದು ಸರಕಾರದವರೂ ಮಾಡುವುದು ಒಳ್ಳೆಯದು. ಆ ರೀತಿಯಾದ ಒಂದು Agricultural Credit Stabilisation Fund ಒಂದನ್ನು ನಮ್ಮ ಸರಕಾರದವರು ಇನ್ನೂ ಮಾಡಿಲ್ಲ. ಈಗ ಎಷ್ಟೋ ಸಹಕಾರ ಸಂಘಗಳಿದ್ದರೂ ಕೂಡ ಸರಿಯಾದ ಆಧಾರವಿಲ್ಲದೆ ಅಪೆಕ್ಸ್ ಬ್ಯಾಂಕಿನವರು ಬೇರೆ ಬ್ಯಾಂಕಿನವರಿಗೆ ಸಾಲ ಕೊಡುವುದಿಲ್ಲ. ರಿಸರ್ವ್ ಬ್ಯಾಂಕಿನ ಮೂಲಕವೂ ಹಣ ಕೊಡುವುದಿಲ್ಲ. ಆದುದರಿಂದ ನಾನು ಮೇಲೆ ಹೇಳಿದ ಹಾಗೆ ಅಗ್ರಿಕಲ್‌ಚರಲ್ ಕ್ರೆಡಿಟ್ ಸ್ಟ್ಯಾಬಿಲೈಸೇಷನ್ ಫಂಡಿನಂತಹ ಒಂದು ಯೋಜನೆಯನ್ನು ಮಾಡಿಲ್ಲ. ಇದರಿಂದ ಹಳ್ಳಿಯ ಜನಕ್ಕೆ ಸರಿಯಾಗಿ ಸಾಲ ಸಿಗುತ್ತಿಲ್ಲ. ಈಗಿರುವ ಅಲ್ಪಾವಧಿ ಮತ್ತು ಮಧ್ಯವರ್ತಿ ಸಾಲಗಳನ್ನು ವಾಪಾರ್ಸು ಮಾಡಿ ಮೂರು ತಿಂಗಳ ಅಥವಾ ಆರು ತಿಂಗಳ ಕಂತುಗಳಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡುವುದು ಸೂಕ್ತವೆಂದು ಸಹಕಾರ ಮಂತ್ರಿಗಳಲ್ಲಿ ಸೂಚಿಸುತ್ತೇನೆ.

ಒಕ್ಕಲಿಗನಿಗೆ ಪ್ರತಿಯೊಂದು ಸೌಕರ್ಯವನ್ನೂ ಒದಗಿಸುತ್ತಾರೆ ಎನ್ನುವ ಮಾತು ಯೋಜನೆಯಲ್ಲಿ ಒಂದು ರೀತಿಯಾಗಿ ಹೇಳಿದ್ದಾರೆ. ಈ ಬಗ್ಗೆ ಸರಕಾರದವರು ಒಕ್ಕಲುತನ ಮಾಡುವಾಗ ಸರಿಯಾಗಿ ಪ್ರಚಾರ ಮಾಡಬೇಕು ಎನ್ನುವ ಮಾತೂ ಇದೆ. ಆದರೆ ನಾನು ನೋಡುವುದರಲ್ಲಿ ಒಕ್ಕಲಿಗನಾಗಿರುವವನಲ್ಲಿ ಮತ್ತು ಉತ್ಪತ್ತಿಯನ್ನು ಮಾಡುತ್ತಿರುವುದರಲ್ಲಿ ಸರಿಯಾದ ಉತ್ಪತ್ತಿ ಬರುವಂತೆ ಕಾಣುತ್ತಿಲ್ಲ. ಹತ್ತಿ, ಜೋಳ, ಗೋಧಿಯ ಬೆಳೆಗಳು, ಆಗಿರುವ ಬೆಳೆಯಲ್ಲಿ ಫಸಲು ಹೆಚ್ಚಾಗಿ ಬೆಳೆದಂತೆ ಕಾಣುವುದಿಲ್ಲ. ಈಗಾಗಲೇ ಹತ್ತು ವರ್ಷಗಳ ಯೋಜನೆಯಾದರೂ ಕೂಡ ಹತ್ತಿ ಹೆಚ್ಚಾಗಿ ಬೆಳೆದಂತೆ ನಮ್ಮ ಕಣ್ಣಿಗೆ ಕಾಣುತ್ತಿಲ್ಲ. ಹಳ್ಳಿಯ ರೈತರಿಗೆ ಏನು ಸೌಕರ್ಯಗಳು ಬೇಕು, ಯಾವ ವೇಳೆಗೆ ಸಿಗಬೇಕು ಅದು ಸಿಗದಂತಾಗಿ ಒಕ್ಕಲಿಗನಾದವನು ಹಿಂದೆ ಯಾವ ಸ್ಥಿತಿಯಲ್ಲಿದ್ದನೋ ಅದೇ ಸ್ಥಿತಿಯಲ್ಲಿ ಇನ್ನೂ ಇದ್ದಾನೆ. ನಮ್ಮ ಮುಂಬಯಿ ಭಾಗದಲ್ಲಿ ಗೋಧಿಯನ್ನು ರೀಸರ್ಚ್ ಮಾಡಲು ಅದಕ್ಕೆ ಸಂಬಧಪಟ್ಟಂತೆ ಮಹಾಬಲೇಶ್ವರದಲ್ಲಿ ಒಂದು ಕೇಂದ್ರವಿತ್ತು. ಅಲ್ಲಿ ಈ ಬೆಳೆಗೆ ರಸ್ಟು ಹಿಡಿಯುವುದನ್ನು ತಪ್ಪಿಸಲು, ಸರಿಯಾದ ಬೀಜಗಳನ್ನು ಹುಟ್ಟಿಸಿ ತಕ್ಕ ಫಾಂಡೇಷನ್ನನ್ನು ಹಾಕಿ ಅದರಂತೆ ಇಲ್ಲಿಯೂ ಒಂದು ಯೋಜನೆ ಮಾಡುವುದು ಎಂದು ಅಲ್ಲಿ ಇತ್ತು. ಈಚೆಗೆ ಈ ಮುಂಬಯಿ ಭಾಗದ ಪ್ರದೇಶಗಳು ಮೈಸೂರು ಕಡೆಗೆ ಸೇರಿದವೇಲೆ ಗೋಧಿಯನು ರೀಸರ್ಚ್ ಮಾಡುವ ಕೆಲಸ ಏನೂ ಮಾಡಿಲ್ಲ. ಇದನ್ನು ನೋಡಿದರೆ ಒಕ್ಕಲುತನ ಮಾಡುವವರ ಕಡೆಗೆ ಈ ಸರಕಾರದವರು ಏನೂ ದೃಷ್ಟಿಯಿಟ್ಟಿಲ್ಲವೆಂದು ಕಾಣುತ್ತದೆ. ಇದನ್ನು ನೋಡುವಾಗ ಇಲ್ಲಿ ರೀಸರ್ಚಿನ ಕಡೆಗೆ ಹೆಚ್ಚು ಲಕ್ಷವನ್ನಿಟ್ಟಿಲ್ಲವೋ ಏನೋ ಎನ್ನುವುದು ಕಾಣುತ್ತಿದೆ. ಸರಿಯಾದ ಸಂಶೋಧನೆಯ ವ್ಯವಸ್ಥೆ ಇದ್ದರೆ ನಮ್ಮ ಕಡೆಗೆ ಹತ್ತಿ ಬೆಳೆಯುವ ಉತ್ತಮವಾದ ಬ್ಲಾಕ್ ಕಾಟನ್‌ನಂತಹ ಭೂಮಿ ಇವೆ. ಮೊನ್ನೆ ಮೊನ್ನೆ ಇಲ್ಲಿ ಲಕ್ಷ್ಮಿ ಹತ್ತಿಗೆ ಒಂದು ರೀತಿಯ ಹುಳ ಮುತ್ತಿಕೊಂಡುದರ ಕಾರಣ ಒಂದು ಹೊಲದಲ್ಲಿದ್ದ ಪೂರ್ಣ ಹತ್ತಿ ಬೆಳೆ ಕೂಡ ನಾಶವಾದುದು ನಮ್ಮ ಜನರಿಗೆ ಎದ್ದು ಕಾಣುತ್ತಿವೆ.

ಶ್ರೀ ಟಿ. ಎಸ್. ಮಾಡಲಗಿರಿ ಗೌಡ.—ಶ್ರೀಮಾನ್ ವಿ. ಎಸ್. ಪಾಟೀಲ್‌ರವರು, ನಮ್ಮ ಈ ಭಾಗದಲ್ಲೆಲ್ಲಾ ಸಂಶೋಧನೆ ಚೆನ್ನಾಗಿ ನಡೆಯುತ್ತಿದೆ ಎನ್ನುವ ಅರ್ಥ ಬರುವಂತೆ ಹೇಳಿದ್ದಾರೆ. ಇಲ್ಲಿಯೂ ಕೂಡ ಸರಿಯಾಗಿ ಸಂಶೋಧನೆ ನಡೆಯುತ್ತಿಲ್ಲ. ಈ ಸಾರಿ ಶೇಕಡಾ ಐವತ್ತರಷ್ಟು ರಾಗಿ ಬೆಳೆಯೂ ಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆ.

ಶ್ರೀ ಎ. ಎಸ್. ಪಾಟೀಲ್.—ಒಕ್ಕಲುತನ ಮಾಡುವವರಿಗೆ ಸಾಕರ್ಯವನ್ನು ಮಾಡಲು, ಸಂಶೋಧನೆಯನ್ನು ಮಾಡುವುದರಿಂದ ಮತ್ತು ಈ ಜನಕ್ಕೆ ಸಹಾಯ ದೊರಕಿಸಿ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಇಲ್ಲ ಕೆಲವು ಮಾತುಗಳನ್ನು ಹೇಳಬೇಕೆಂದು ಸೂಚನೆ ಮಾಡುತ್ತಿದ್ದೇನೆ. ಈ ಸಂಶೋಧನೆಯನ್ನು ಮಾಡುವುದರಲ್ಲಿ ಅಂತಹ ಕಷ್ಟವೇನಿಲ್ಲ. ಪ್ರತ್ಯೇಕವಾಗಿ ಒಬ್ಬರು ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಎನ್ನುವವರನ್ನು ತಾವು ಸಂಶೋಧನೆ ಕಡೆಗೆ ಪೂರ್ಣವಾಗಿ ಗಮನ ಕೊಡಬೇಕೆಂದು ಈ ಸಂಶೋಧನೆಯ ಭಾಗವನ್ನು ಬೇಗಡನೆ ಮಾಡಿ ಏರ್ಪಾಡು ಮಾಡಿದರೆ ಈಗ ಬರುತ್ತಿರುವ ಗೋಧಿ, ರಾಗಿ ಫಸಲುಗಳಿಗೆ ಆಗುವ ತೊಂದರೆಯನ್ನು ನಿವಾರಿಸಬಹುದು ಎಂದು ನನಗೆ ತೋರುತ್ತದೆ. ಈ ರೀತಿಯಾಗಿ ಶಾಶ್ವತವಾದ ಯೋಜನೆಯನ್ನು ಮಾಡುವುದು ಒಳ್ಳೆಯದು, ಇದರಿಂದ ಒಕ್ಕಲುತನದಲ್ಲಿರುವ ಎಷ್ಟೋ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬಹುದು. ಈಗ ಸಾಗುವಳಿಯನ್ನು ಹೇಗೆ ಮಾಡುತ್ತಿದ್ದಾರೆ, ಉಳುಮೆ ಮಾಡುವುದಕ್ಕೆ ಸರಿಯಾದ ಬೆಳೆಯನ್ನು ತೆಗೆಯುತ್ತಿದ್ದಾರೆಯೇ ಎನ್ನುವ ಬಗೆಗೆ ಸರಿಯಾದ ಪ್ರಚಾರ ನಡೆಯದೆ ಒಕ್ಕಲುತನ ಮಾಡುವ ರೈತರಿಗೆ ಬಹಳ ಕಷ್ಟಗಳಾಗುತ್ತಿವೆ. ಸಿ. ಒ. ಟೂ. (C. O. 2) ಬೀಜ ಬೇಕೆಂದು ಕೇಳಿದರೆ ಅದು ಎಲ್ಲ ಸಿಕ್ಕುತ್ತದೆ ಎನ್ನುವುದನ್ನು ಸರಿಯಾಗಿ ತಿಳಿಸುವವರೂ ಇಲ್ಲದೇ ಇದೆ. ನನ್ನ ಸ್ವಂತ ಅನುಭವದ ಮೇಲೆ ಹೇಳುವದಾದರೆ ಒಕ್ಕಲುತನ ಮಾಡುವವರ ಕಡೆಗೆ ಸರಿಯಾದ ಸುಧಾರಣೆ ನಡೆದಿಲ್ಲ. ಇನ್ನು ಮೇಲಾದರೂ ಸರಕಾರ ಸರಿಯಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

5–00 P.M.

ಇನ್ನು ಒಂದೆರಡು ಮಾತುಗಳನ್ನು ಶಿಕ್ಷಣದ ವಿಚಾರವಾಗಿ ಹೇಳಬೇಕಾಗಿದೆ. ನನ್ನ ಮನಸ್ಸಿಗೆ ಈ ಬಗ್ಗೆ ಬಹಳ ಕಳವಳ, ಗೊಂದಲ ಉಂಟಾಗಿದೆ. ಎಲ್ಲಿ ಶಿಕ್ಷಣ ಪೂರ್ತಿ ಮರೆತಂತಾಗುತ್ತದೋ ಎಂಬ ಸಂಶಯವೂ ಕೂಡ ನನಗೆ ಉಂಟಾಗಿದೆ. ಏಕೆಂದರೆ ಈಗಿನ ಶಿಕ್ಷಣ ವ್ಯವಸ್ಥೆ ಆ ರೀತಿ ಇದೆ. ಆದ್ದರಿಂದ ಶಿಕ್ಷಣ ಶಾಖೆಯಲ್ಲಿ ತಜ್ಞರನ್ನು ಅದರಲ್ಲಿ ಚೆನ್ನಾಗಿ ಅರಿತು ನುರಿತವರನ್ನು ಒಳ್ಳೆಯ ವಿದ್ಯಾವಂತರನ್ನು ಹಾಕುವುದು ಯೋಗ್ಯವೆಂದು ನನಗನ್ನಿಸುತ್ತದೆ. ಆರೀತಿ ಮಾಡದೆ ಇರತಕ್ಕ ವ್ಯವಸ್ಥೆಯನ್ನೇ ಈ ಸರ್ಕಾರ ಮುಂದುವರಿಸುತ್ತಿದೆಯಲ್ಲಾ ಎಂದು ನನಗೆ ಇದನ್ನು ನೋಡಿ ವಿಷಾದಕರವಾಗಿದೆ. ಈಗ ಡಿಸ್ಟ್ರಿಕ್ ಬೋರ್ಡುಗಳು ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸುತ್ತಿವೆ. ಬಹಳ ವರ್ಷಗಳಿಂದಲೂ ಇವೆ. ಆದರೆ ತಾಲ್ಲೂಕು ಬೋರ್ಡುಗಳಿಗೆ ಇವುಗಳ ಅಧಿಕಾರವನ್ನು ವಹಿಸಿಕೊಟ್ಟಿದ್ದೇ ಆದರೆ ಈಗಲೇ ಹದಗೆಟ್ಟಿರುವ ಶಿಕ್ಷಣವು ಮತ್ತಷ್ಟು ಹದಗೆಟ್ಟು ಪೂರ್ತಿ ಶಿಕ್ಷಣವು ರಾಜ್ಯದಲ್ಲಿ ಕೆಟ್ಟು ಹೋಗುತ್ತದೆ. ಮುಖ್ಯ ಮಂತ್ರಿಗಳು ಮತ್ತು ವಿದ್ಯಾಮಂತ್ರಿಗಳು ಈ ಬಗ್ಗೆ ಚೆನ್ನಾಗಿ ವಿಚಾರ ಮಾಡಬೇಕು. ಸಾಧ್ಯವಾದ ಮಟ್ಟಿಗೂ ವಿದ್ಯಾಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಈವಿಚಾರ ಮಾಡಿದಮೇಲೆ ನನ್ನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಹೇಳುವುದಿಲ್ಲ ವೆಂದನ್ನಿಸುತ್ತದೆ. ಅವರ ಜಿಲ್ಲೆಯಾದ್ದರಿಂದ ಇದನ್ನು ಸರಿಯಾಗಿ ನೋಡಿಕೊಂಡು ಹೋಗುತ್ತಾರೆಂದು ನನ್ನ ಭಾವನೆ. ಒಂದು ವೇಳೆ ಶಿಕ್ಷಣದ ಅಧಿಕಾರವನ್ನು ತಾಲ್ಲೂಕ್ ಬೋರ್ಡುಗಳಿಗೆ ವಹಿಸಿದರೆ ನಮ್ಮ ಈ ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ನಡೆಯುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಎಲ್ಲೆಲ್ಲಿ ತಾಲ್ಲೂಕ್ ಬೋರ್ಡುಗಳು ಭರವಸೆಯನ್ನು ಕೊಟ್ಟು ಶಿಕ್ಷಣವನ್ನು ಜವಾಬ್ದಾರಿಯುತವಾಗಿ ಸಾಗಿಸಿಕೊಂಡು ಹೋಗುತ್ತೇವೆ ಎಂಬು

(ಶ್ರೀ ಎ. ಎಸ್. ಪಾಟೀಲ್)

ದಾಗಿ ಹೇಳುತ್ತಿದ್ದಾರೋ ಅದನ್ನು ನಾನು ಒಪ್ಪುವುದಿಲ್ಲ. ಇದು ನನ್ನ ಸ್ವಂತ ಅನುಭವ. ಸುಮಾರು 15 ವರ್ಷಗಳಿಂದಲೂ ನೋಡುತ್ತಿದ್ದೇನೆ. ಡಿಸ್ಟ್ರಿಕ್ಟ್ ಬೋರ್ಡುಗಳು ನಡೆಸುತ್ತಿರುವ ಶಿಕ್ಷಣದ ಅಧಿಕಾರವನ್ನು ಯಾವ ಕಾರಣದಿಂದಲೂ ತಾಲ್ಲೂಕ್ ಬೋರ್ಡುಗಳಿಗೆ ಕೊಡಬಾರದು ಎಂದು ನಾನು ಹೇಳುತ್ತೇನೆ. ಇದನ್ನು ವಿದ್ಯಾಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಬೇಕು.

ಒಬ್ಬ ಸದಸ್ಯರು.—ಈಗಿನ ಜಿಲ್ಲಾ ಸ್ಕೂಲುಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ಸೇರಿಸಿದರೆ ಏನಾಗುತ್ತದೆ?

ಶ್ರೀ ಎ. ಎಸ್. ಪಾಟೀಲ್.—ನಾನು ಅದನ್ನು ಹೇಳುವುದಿಲ್ಲ. ಒಟ್ಟಿನಲ್ಲಿ ತಜ್ಞರನ್ನು ಕರೆದುಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ತಳಹದಿಯನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಪ್ರಯತ್ನ ಪಡಬೇಕು. ಇದು ಈಗ ಬಹಳ ದೊಡ್ಡ ಸಮಸ್ಯೆಯಾಗಿದೆ.

ಶ್ರೀ ಬಿ. ಡಿ. ಜತ್ತಿ.—ತಮ್ಮ ಸಲಹೆ ಹೇಳಿ.

ಶ್ರೀ ಎ.ಎಸ್. ಪಾಟೀಲ್.—ನನ್ನ ಸಲಹೆಯನ್ನು ಹೇಳುವುದಾದರೆ, ಈಗ ಒಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇರುವಂತೆ ತಜ್ಞರನ್ನೊಳಗೊಂಡ ಮತ್ತು ಜಿಲ್ಲಾ ಮಟ್ಟದಲ್ಲಿ ಜನರ ಪ್ರತಿನಿಧಿಗಳನ್ನೊಳಗೊಂಡ ಒಂದು ಕಮಿಟಿಯನ್ನು ರಚನೆ ಮಾಡಬೇಕು. ಇಲ್ಲಿರುವವರನ್ನು ಅಲ್ಲಿಗೆ, ಅಲ್ಲಿರುವವರನ್ನು ಇಲ್ಲಿಗೆ ಬದಲಾಯಿಸುವ ಕ್ರಮದಿಂದ ಬಹಳ ತೊಂದರೆಯಾಗುತ್ತಿದೆ. ಇದರಿಂದಲೇ ಶಿಕ್ಷಣದ ಕ್ರಮ ತುಂಬಾ ಹದಗೆಟ್ಟಿದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾನ್ಯ ವಿದ್ಯಾಮಂತ್ರಿಗಳು ಈ ವಿಷಯವನ್ನು ಕೂಲಂಕಷವಾಗಿ ವಿಚಾರ ಮಾಡಬೇಕು. ಶಿಕ್ಷಣವನ್ನು ರಾಜ್ಯದಲ್ಲಿ ಸರಿಯಾಗಿ ಮತ್ತು ಉತ್ತಮ ರೀತಿಯಲ್ಲಿ ಕೊಡಬೇಕು ಎಂಬುದಾಗಿ ಆಶಯವಾಡಿ ಉಳಿದ ಕೆಲವು ಮಾತುಗಳನ್ನು ಸಂಬಂಧಪಟ್ಟ ಡಿಮ್ಯಾಂಡ್ ಚರ್ಚೆಗೆ ಬರುವಂತಹ ಕಾಲದಲ್ಲಿ ಹೇಳುತ್ತೇನೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರ).—ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರುವ 1661-62ನೇ ಆಯವ್ಯಯ ಪಟ್ಟಿಯ ವಿಷಯವಾಗಿ ನನಗೆ ಕೊಟ್ಟಿರುವ ಕೇವಲ 15 ನಿಮಿಷಗಳಲ್ಲಿ ಒಂದೆರಡು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಮೊದಲನೆಯದಾಗಿ, ಈ ವರ್ಷ ಎರಡನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವಾಗಿದೆ. ಏಪ್ರಿಲ್ ಒಂದನೇ ತಾರೀಖಿನಿಂದ ಮೂರನೆಯ ಪಾಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷ ಶುರು ಆಗುತ್ತದೆ. ಆದರೆ ನಿಮ್ಮ ಆಯವ್ಯಯ ಪಟ್ಟಿಯ ಮೇಲೆ ಮಾಡಿರತಕ್ಕ ಭಾಷಣದಲ್ಲಿ ಹೇಳಿರುವಂತೆ ಈ ವರ್ಷ 47½ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಆದರೆ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸುಮಾರು 36 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೀರಿ. ಈ ವರ್ಷ ಖರ್ಚುಮಾಡಿದ್ದಕ್ಕಿಂತ ಮುಂದಿನ ವರ್ಷ 11 ಕೋಟಿ ರೂಪಾಯಿಗಳನ್ನು ಕಡಮೆ ಖರ್ಚು ಮಾಡುತ್ತಿದ್ದೇವೆಂಬುದನ್ನು ನಾವೇ ಒಪ್ಪಿಕೊಳ್ಳಲಾಯಿತು. ಅಂದಮೇಲೆ ಈ ಪಾಂಚವಾರ್ಷಿಕ ಯೋಜನೆಯನ್ನು ನಮ್ಮ ಮೈಸೂರು ಸಂಸ್ಥಾನಕ್ಕೂ ಮತ್ತು ಇತರ ಸ್ಟೇಟುಗಳಿಗೂ ಹೋಲಿಸಿ ನೋಡಿದರೆ ಆದಾಯ ಬಹಳ ಕಡಮೆಯಾಗಿದೆ. ಸದರೀ ಮದ್ರಾಸ್ ಅಥವಾ ಕೇರಳ ಪ್ರಾಂತಗಳನ್ನು ಹೋಲಿಸಿ ನೋಡಿದರೂ ಸಹ ನಮ್ಮ ಆದಾಯ ಬಹಳ ಕಡಮೆಯಾಗಿಯೇ ಇದೆ. ಈ ರೀತಿಯಾಗಿ ನಮ್ಮ ಮೈಸೂರು ಸಂಸ್ಥಾನದ ಆದಾಯ ಕಡಮೆ ಇರುವುದನ್ನು ನೋಡಿಯೇ ಪ್ಲಾನಿಂಗ್ ಕಮಿಷನ್ನಿನವರು ಬಹಳ ಕಡಿಮೆ ಹಣವನ್ನು ಮೈಸೂರಿಗೆ ಅಲಾಟ್ ಮಾಡುತ್ತಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅದಕ್ಕೆ ನಾವೇ ಜವಾಬ್ದಾರರು ಎಂದು ಹೇಳಬೇಕಾಗಿದೆ. 1947 ರಿಂದ 1957 ರವರೆಗೆ 40.51 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ

ದ್ದೀರಿ. ಯೋಜನಾ ಶಾಖೆಯಲ್ಲಿ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. 2ನೇ ಪಾಂಚವಾರ್ಷಿಕ ಯೋಜನೆಗಾಗಿ ಒದಗಿಸಿದ್ದ ಸುಮಾರು 145.13 ಕೋಟಿ ರೂಪಾಯಿಗಳ ಪೈಕಿ ಕೇವಲ 136 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅಂದರೆ 9 ಕೋಟಿ ರೂಪಾಯಿಗಳ ಟಾರ್ಜೆಟ್ಟನ್ನು ಕಡಮೆ ಖರ್ಚು ಮಾಡಿರುತ್ತೀರಿ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ. ರಿವೈಜ್ಡ್ ಪ್ರಕಾರ 136 ಕೋಟಿ ರೂಪಾಯಿಗಳನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಗೆ ಖರ್ಚು ಮಾಡಬೇಕೆಂದಿದ್ದುದು 140 ಕೋಟಿ ರೂಪಾಯಿಗಳಿಗೆ ಮಾಡಿದ್ದೇವೆ. ನಾವೇನೂ ಕಡಮೆ ಮಾಡಲಿಲ್ಲ. ಹೆಚ್ಚು ಖರ್ಚು ಮಾಡಿದ್ದೇವೆ. ಒಟ್ಟು 142 ಕೋಟಿ ಆಗುತ್ತದೆ. ನೀವು ಹೋದ ವರ್ಷ ಸುಮಾರು 11 ಕೋಟಿ ರೂಪಾಯಿಗಳನ್ನು ಕಡಮೆ ಖರ್ಚು ಮಾಡುತ್ತಿದ್ದೇವೆಂಬುದನ್ನು ನೀವೇ ಒಪ್ಪಿಕೊಂಡಿರುವಾಗ ಅದು ನಮ್ಮ ದೇಶದ ದುಸ್ಥಿತಿ ಎಂದು ಈಗ ಹೇಳಬೇಕಾಗಿದೆ.

ಶ್ರೀ ಎ. ಎಂ. ಬಸವೇಗೌಡ.—ಹೋದ ವರ್ಷ 144 ಚಿಲ್ಲರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ಈ ವರ್ಷ 136 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತೀರಿ.

ಶ್ರೀ ಟಿ. ಮರಿಯಪ್ಪ.—ಅದಕ್ಕೆ ಸರಿಯಾದ ಆದಾಯ-ಖರ್ಚು ಇದೆಯಲ್ಲಾ!

ಶ್ರೀ ಎ. ಎಂ. ಬಸವೇಗೌಡ.—ತಾವೇ ಹೇಳಿದ ಹಾಗೆ ಈ ವರ್ಷ ಗ್ರಾಮಾಭಿವೃದ್ಧಿಗೆ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ನೋಡಿ. ಹೋದ ವರ್ಷ 147.92 ಲಕ್ಷ ಕೊಟ್ಟಿದ್ದೀರಿ. ಈ ವರ್ಷ ಅದರಲ್ಲಿ 20 ಲಕ್ಷವನ್ನು ಗ್ರಾಮಾಭಿವೃದ್ಧಿ ಖಾತೆಗೆ ಖೋತಾ ಮಾಡಿದ್ದೀರಿ. ಒಂದು ಕಡೆ ಗ್ರಾಮಾಭಿವೃದ್ಧಿ ಆಗಬೇಕೆಂದು ಹೇಳುವುದು, ಮತ್ತೊಂದು ಕಡೆ ಗ್ರಾಮಾಭಿವೃದ್ಧಿಗೆ ಒದಗಿಸುವ ಹಣವನ್ನು ಖೋತಾ ಮಾಡುವುದು. ಇತ್ತೀಚೆಗೆ ಈ ಬಾಬಿಗೆ ಒದಗಿಸತಕ್ಕ ಹಣ ಬಹಳ ಕಡಮೆಯಾಗುತ್ತಿದೆ. ಇದರಿಂದ ಸರ್ಕಾರದವರಿಗೆ ಗ್ರಾಮಾಭಿವೃದ್ಧಿಯ ಕಡೆಗೆ ಎಷ್ಟರಮಟ್ಟಿಗೆ ಆಸಕ್ತಿ, ಶ್ರದ್ಧೆ ಇದೆ ಎಂಬುದು ಚೆನ್ನಾಗಿ ಎತ್ತಿ ತೋರಿಸುತ್ತದೆ. ಯಾವ ರೀತಿ ಗ್ರಾಮಗಳ ಅಭಿವೃದ್ಧಿಯನ್ನು ಕಡೆಗಣಿಸಿದ್ದಾರೆಂಬುದು ಇದರಿಂದಲೇ ಚೆನ್ನಾಗಿ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಈಗ ಒಟ್ಟು 29 ಸಾವಿರ ಹಳ್ಳಿಗಳಿವೆ.

ಶ್ರೀ ಟಿ. ಮರಿಯಪ್ಪ.—ಟೀಕೆ ಮಾಡುವುದರಲ್ಲಿಯೂ ವೈಯಕ್ತಿಕವಾಗಿ ಸ್ವಲ್ಪ ಚೆನ್ನಾಗಿ ಅಂಕಿಅಂಶಗಳನ್ನು ತಿಳಿದುಕೊಂಡು ಹೇಳಿ.

ಶ್ರೀ ಎ. ಎಂ. ಬಸವೇಗೌಡ.—ನಾನು ಕರಾರುವಾಕ್ಕಾದ ಅಂಶಗಳನ್ನೇ ಹೇಳುತ್ತಿದ್ದೇನೆ. ಪ್ರತಿಯೊಂದು ಬಾಬಿಗೂ ಒದಗಿಸಿರುವ ಹಣ ಕಡಮೆ ಇದೆ. ಉದಾಹರಣೆಗೆ ಜನರಲ್ ಸ್ಕಾಲರ್ ಷಿಪ್ ಐಟಂ ತೆಗೆದುಕೊಂಡು ನೋಡಿ. ಅದೂ ಕಡಮೆ ಇದೆ. ಟೈಂ ಕೊಟ್ಟರೆ ಯಾವ್ಯಾವ ಬಾಬುಗಳಲ್ಲಿ ಕಡಮೆ ಹಣ ಅಲಾಟ್‌ಮೆಂಟ್ ಮಾಡಿದ್ದೀರಿ ಎಂಬುದನ್ನು ಒಂದು ಸ್ಟೇಟ್‌ಮೆಂಟ್ ಹಾಕಿ ಕೊಡುತ್ತೇನೆ. ಎಷ್ಟು ಹಳ್ಳಿಗಳಲ್ಲಿ ಪ್ರೈಮರಿ ಸ್ಕೂಲುಗಳಿವೆ ಎಂದು ಕೇಳಿದರೆ ನಿಮಗೆ ಗೊತ್ತಿಲ್ಲವೆಂದು ಹೇಳಿದ್ದೀರಿ. ಸಾಮಾನ್ಯವಾಗಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು, ಪ್ರೈಮರಿ ಸ್ಕೂಲುಗಳಿವೆ ಎಂಬುದನ್ನು ಕೇಳಿದರೆ ಸರ್ಕಾರಕ್ಕೆ ಉತ್ತರ ಹೇಳುವುದಕ್ಕಾಗದೆ ಇರುವಾಗ ನಿಮ್ಮ ಪರಿಸ್ಥಿತಿ ಏನಾಗಿದೆ ಯೆಂಬುದೇ ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವುದಕ್ಕೆ ನಿಮಗೇ ಇಷ್ಟವಿಲ್ಲವೆಂದು ನನಗೆ ಕಾಣುತ್ತದೆ. ಈ ವರ್ಷ ಪ್ರೈಮರಿ ಸ್ಕೂಲುಗಳಿಗಾಗಿ ಕೇವಲ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಸಾಕಾಗುತ್ತಿರಲಿಲ್ಲ. ಈಗ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂದಿರುವಾಗ ಈಗ ನೀವು ಒದಗಿಸಿರತಕ್ಕ ಕೇವಲ ನಾಲ್ಕು ಲಕ್ಷ ರೂಪಾಯಿಗಳು ಯಾವ ಮೂಲೆಗೆ ಆಗುತ್ತವೆ? ಬೇರೆ ಖಾತೆಗಳಿಗೆ ಕೊಟ್ಟಿರುವ ಮೊಬಲಗನ್ನು

(ಶ್ರೀ ಎ. ಎಂ. ಬಸವೇಗೌಡ)

ಸ್ವಲ್ಪ ಜೋರಾಗಿ ಮಾಡಿ. ಈ ಬಾಬಿಗೆ ಹೆಚ್ಚಿಗೆ ಒದಗಿಸಬೇಕು. ಈ ವಿಷಯವನ್ನು ಪ್ಲಾನಿಂಗ್ ಕಮಿಷನ್ನಿನವರೂ ಸಹ ಆಲೋಚನೆ ಮಾಡಬೇಕು. ನಮ್ಮಲ್ಲಿ ರೈಲ್ವೆ ಸೌಕರ್ಯವೇ ಇಲ್ಲ. ಕೆಲವು ಹಳ್ಳಿಗಳಲ್ಲಿ ಬಡವರೇ ಹೆಚ್ಚಿಗೆ ಇರುತ್ತಾರೆ. ಇನ್‌ಫ್ಲುಯನ್ಸ್ ಇರುವುದಿಲ್ಲ. ಪ್ರೈಮರಿ ಸ್ಕೂಲುಗಳು, ಕುಡಿಯುವ ನೀರಿನ ಬಾವಿಗಳು, ಸಣ್ಣ ಸೇತುವೆಗಳ ನಿರ್ಮಾಣ, ರಸ್ತೆ ಸಾರಿಗೆ ಸೌಕರ್ಯಗಳು ಕೆಲವುಕಡೆ ಹಳ್ಳಿಗಳಲ್ಲಿರುತ್ತವೆ. ಮತ್ತೆ ಕೆಲವು ಕಡೆಗಳಲ್ಲಿ ಯಾವೊಂದು ಸೌಕರ್ಯವೂ ಅಷ್ಟಾಗಿರುವುದಿಲ್ಲ. ಆದ್ದರಿಂದ ಅನೇಕ ಹಳ್ಳಿಗಳಲ್ಲಿರುವವರೇ ಅಂಥಾ ಸೌಕರ್ಯಗಳನ್ನು ನಾವು ಪಡೆಯದಿರುವುದು ಇದು ಒಂದು ನಮ್ಮ ದುರ್ಲಭವೆಂದು ಹೇಳುತ್ತಿರುತ್ತಾರೆ. ಒಟ್ಟಿನಲ್ಲಿ ಹಳ್ಳಿಗಳ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಟ್ಟಿಲ್ಲವೆಂದು ಹೇಳಬಹುದು. ಆದರೆ ಡೆವಲಪ್‌ಮೆಂಟ್ ವರ್ಕ್ಸ್ ಟೌನ್‌ಗಳಲ್ಲಿ ಬೆಳೆದರೆ ಮಾತ್ರ ನಮ್ಮ ದೇಶ ಬೆಳೆಯುತ್ತಿದೆ ಎಂದು ಯಾರೂ ತಿಳಿಯಬಾರದು. ಮುಖ್ಯವಾಗಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಪ್ರತಿಯೊಂದು ಗ್ರಾಮದಲ್ಲೂ ಕಟ್ಟಲು ಹೆಚ್ಚಿನ ಮೊಬಲಗನ್ನು ಈ ಪಾಂಚವಾರ್ಷಿಕ ಯೋಜನೆಯಲ್ಲಿ ನಿಗದಿ ಮಾಡಬೇಕು. ಇತ್ತೀಚೆಗೆ ಮಾತ್ರ ಪ್ರತಿಯೊಂದು ಡಿಸ್ಟ್ರಿಕ್ಟ್ ಕ್ವಾರ್ಟರ್‌ನಲ್ಲಿಯೂ ಹೆಚ್ಚು ಹೆಚ್ಚಾಗಿ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತಿವೆ ಎಂದು ಹೇಳುತ್ತಿದ್ದಾರೆ. ಆದರೆ ಆ ಭಾರಿ ಬಾರೀ ಕೈಗಾರಿಕೆಗಳನ್ನು ಮತ್ತು ಭಾರಿ ಭಾರಿ ಕಟ್ಟಡಗಳನ್ನು ನೋಡಿ ನಮ್ಮ ದೇಶ ಅಭಿವೃದ್ಧಿಯಾಯಿತು ಎಂದು ನಾವು ಕಂಡಿತವಾಗಿ ತಿಳಿಯಬಾರದು. ನಮ್ಮ ಚಿಕ್ಕಮಗಳೂರ್ ಜಿಲ್ಲೆಯ ವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. 20–25 ವರ್ಷಗಳಿಂದಲೂ ಒಂದು ಅಪ್-ಗ್ರೇಡ್ ಫಸ್ಟ್‌ಕ್ಲಾಸ್ ಕಾಲೇಜನ್ನು ಕೊಡಿ ಎಂದು ಕೇಳಿದರೂ ಇದುವರೆಗೆ ಏನೂ ಆಗಿಲ್ಲ. ಒಂದು ಸಾರಿ ಡೆಪ್ಯುಟಿ ಕಮೀಷನರ್ ಬಂದರು. ಅವರು ಏನು ಹೇಳಿದರೆಂದರೆ ನೀವು ಒಂದು ಸೊಸೈಟಿ ಮಾಡಿಕೊಂಡರೆ ನಿಮಗೆ ನಾವು ಟೆಕ್ನಿಕಲ್ ಮತ್ತು ಹೈಯರ್ ಎಜುಕೇಷನ್, ಇತ್ಯಾದಿ ಸೌಕರ್ಯಗಳನ್ನು ಕೊಡುತ್ತೇವೆಂದು ಹೇಳಿದರು. ಅಲ್ಲದೆ ಈಚೆಗೆ ಯಾವ ಕಾಲೇಜನ್ನೂ ಅಪ್ ಗ್ರೇಡ್ ಮಾಡುವುದಿಲ್ಲವೆಂದು ಸರ್ಕಾರದ ಪಾಲಿಸಿ ಇದೆಯೆಂದು ಹೇಳಿದರು. ಹೀಗಾದರೆ ಅಲ್ಲಿನ ಜನರ ಗತಿಯೇನು? ಸರ್ಕಾರದವರು ಈ ವಿಷಯವನ್ನು ದೀರ್ಘವಾಗಿ ಆಲೋಚಿಸಬೇಕು. ಈಗ 3ನೇ ಪಾಂಚವಾರ್ಷಿಕ ಯೋಜನೆಯಲ್ಲಿ 3 ಕಾಲೇಜುಗಳನ್ನು ಅಪ್-ಗ್ರೇಡ್ ಕಾಲೇಜುಗಳನ್ನಾಗಿ ಮಾಡಬೇಕು ಎಂದು ಹೊರಟಿದ್ದೀರಿ. ಚಿಕ್ಕಮಗಳೂರಿನಲ್ಲಿ ಖಂಡಿತವಾಗಿ ಒಂದು ಅಪ್-ಗ್ರೇಡ್ ಕಾಲೇಜನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮೊಟ್ಟ ಮೊದಲನೆಯದಾಗಿ, ಹಿಂದುಳಿದವರಿಗೆ ಈ ಅನುಕೂಲವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಮಂತ್ರಿಗಳು ಕಂಪಲ್ಸರಿ ಎಜುಕೇಷನ್ ಮಾತ್ರ ಸರ್ಕಾರದ ಜವಾಬ್ದಾರಿಯೆಂದು ಹೇಳಿದರು. ಹಾಗಿದ್ದರೆ ನೀವು ಹೈಯರ್ ಎಜುಕೇಷನ್ ಮತ್ತು ಯೂನಿವರ್ಸಿಟಿ ಎಜುಕೇಷನ್ ಕಟ್ಟಿಕೊಂಡು ಅನೇಕ - ಕಾಲೇಜುಗಳನ್ನು ಏಕೆ ನಡೆಸುತ್ತಿದ್ದೀರಿ? ಅವುಗಳನ್ನು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ವಹಿಸಿಬಿಡಿ. ಬೆಂಗಳೂರು-ಮೈಸೂರುಗಳಲ್ಲಿ ಮಾತ್ರ ಕಾಲೇಜುಗಳನ್ನು ಸ್ಥಾಪನೆ ಮಾಡುತ್ತೀರ. ಬಾಕಿ ಕಡೆಗಳಲ್ಲಿ ಮಾಡಿ ಎಂದರೆ ಜನರಲ್ ಕಂಟ್ರಿಬ್ಯೂಷನ್ ಕೇಳುತ್ತೀರ. ಸೊಸೈಟಿ ಮಾಡಿಕೊಳ್ಳಿ ಎನ್ನುತ್ತೀರ. ಅದೇ ಪ್ರಿನ್ಸಿಪಲ್ಲನ್ನು ಬೆಂಗಳೂರು ಮತ್ತು ಮೈಸೂರಿಗೂ ಅನ್ವಯಿಸಿ. ಅಲ್ಲಿಯೂ ಸೊಸೈಟಿಗಳನ್ನು ಮಾಡಿಕೊಂಡು ಜನ ಕಾಲೇಜುಗಳನ್ನು ನಡೆಸಲಿ, ನೀವು ಏನೇ ಆಗಲಿ, ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿರುವ ಎಲ್ಲಾ ಕಾಲೇಜುಗಳನ್ನೂ ಕೂಡಲೆ ಅಪ್‌ಗ್ರೇಡ್ ಮಾಡಲೇಬೇಕು. ಹಾಸನ ಮತ್ತು ಚಿತ್ರದುರ್ಗಕ್ಕೆ ಯಾವ ಪ್ರಿನ್ಸಿಪಲ್ ಮತ್ತು ಯಾವ ಪಾಲಿಸಿಮೇಲೆ ಕಾಲೇಜು ಕೊಟ್ಟಿರಿ? ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಒಂದು ಮಾಡುವುದು ನಿಮಗೆ ಸರಿಯೇ? ನಮ್ಮ ಒಂದು ಡಿಸ್ಟ್ರಿಕ್ಟಿಗೇ ಬೇರೆ ಪಾಲಿಸಿ ಮಾಡಬೇಡಿ. ಹೀಗೆ ಡಿಸ್ಕ್ರಿಮಿನೇಟ್ ಮಾಡಿರುವುದು ಪ್ರಜಾಪ್ರಭುತ್ವದ ದೃಷ್ಟಿಯಲ್ಲಿ ಸರ್ಕಾರಕ್ಕೆ ಯೋಗ್ಯವೇ? ನಮ್ಮ ಡಿಸ್ಟ್ರಿಕ್ಟೂ ಅಭಿವೃದ್ಧಿಯಾಗಬೇಕು. ಆದ್ದರಿಂದ ಬೇಗನೆ ನಮ್ಮ ಡಿಸ್ಟ್ರಿಕ್ಟಿನಲ್ಲಿರುವ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕು.

ಚಿಕ್ಕಮಗಳೂರು ಡಿಸ್ಟ್ರಿಕ್ಟನ್ನು ಅಬಾಲಿಷ್ ಮಾಡಿ ಹರಿದು-ಹಂಚಬೇಕೆಂಬ ಸುದ್ದಿ ಅನೇಕ ಕಡೆ ಕೇಳಿಬರುತ್ತಿದೆ. ಇದನ್ನು ಅಬಾಲಿಷ್ ಮಾಡದಿರಲು ಎರಡು ಪ್ರಬಲಕಾರಣಗಳಿವೆ. ಸೆಂಟ್ರಲ್ ಸ್ಟ್ಯಾಟಿಸ್ಟೀಷಿಯನ್ ಭಟ್‌ರವರು ಕಳುಹಿಸಿರುವ ವರದಿಯಲ್ಲಿ 21 ಡಿಸ್ಟ್ರಿಕ್ಟ್‌ಗಳನ್ನು ಮಾಡಬೇಕೆಂದು ಹೇಳಿದೆ. ಎರಡನೆಯದಾಗಿ, ಚಿಕ್ಕಮಗಳೂರು ಡಿಸ್ಟ್ರಿಕ್ಟನ್ನು ಹರಿದು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಹಂಚಬೇಕೆಂದಿದ್ದರೆ, ಇದನ್ನು ಮಾಡಬಾರದು. ಇದನ್ನು ಮಾಡಬೇಕೆಂದಿದ್ದರೆ ಮೊದಲು ಪ್ರಜೆಗಳ ಅಭಿಪ್ರಾಯ ತೆಗೆದುಕೊಳ್ಳಬೇಕು. ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಾಡಬಾರದು. ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಬಹಳ ಹಿಂದಿನಿಂದ ಬಂದಿದೆ ಅದನ್ನು ಅಬಾಲಿಷ್ ಮಾಡಿದರೆ ಸರ್ಕಾರಕ್ಕೆ ಇನ್ನೂ ಜಾಸ್ತಿ ಖರ್ಚಾಗುತ್ತದೆ. ಶಿವಮೊಗ್ಗದಿಂದ ಕಳಸಕ್ಕೆ ಅಥವ ಕಡಿದಾಳ್ ಮಂಜಪ್ಪನವರ ಊರಿಗೆ 60 ಮೈಲಿಯಾಗುತ್ತದೆ. ನಮ್ಮ ಡಿಸ್ಟ್ರಿಕ್ಟಿನಿಂದ ತೆಗೆದುದರಿಂದ ಏಕಾನಮಿ ಏನೂ ಆಗುವುದಿಲ್ಲ. ನೀವು ಇವತ್ತೆಲ್ಲಾ ಒಬ್ಬ ಡೆಪ್ಯುಟಿ ಕಮೀಷನರು, ಒಬ್ಬ ಪೋಲೀಸು ಸೂಪರಿಂಟೆಂಡೆಂಟ್ ಮತ್ತು ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ಹುದ್ದೆಯನ್ನು ಡಿಸ್ಟ್ರಿಕ್ಟ್ ತೆಗೆದರೆ, ರಿಟ್ರೆಂಚ್ ಮಾಡಬಹುದೇ ಹೊರತು, ಬಾಕಿ ನೌಕರರುಗಳೆಲ್ಲಾ ಇದ್ದೇ ಇರುತ್ತಾರೆ. ಈ ಮೂರು ಪೋಸ್ಟುಗಳನ್ನು ತೆಗೆದುಹಾಕಿದರೆ ಏನೂ ಉಳಿತಾಯವನ್ನು ಮಾಡುವುದಕಾಗುವುದಿಲ್ಲ. ಶರಾವತಿ ಪ್ರಾಜೆಕ್ಟಿನಲ್ಲಿ ಹಿಂದೆ ಹಳೇ ಮೈಸೂರಿನಲ್ಲಿ ಪಿ. ಡಬ್ಲ್ಯು. ಡಿ.ಯಲ್ಲಿ ಎಷ್ಟು ಜನ ಚೀಫ್ ಇಂಜಿನಿಯರು, ಎಕ್ಸಿಕ್ಯೂಟೀವ್ ಇಂಜಿನಿಯರು ಇದ್ದರೋ ಅಷ್ಟೇ ಸ್ಟಾಫ್ ಇದೆ. ಆದ್ದರಿಂದ ನೀವು ಡಿಸ್ಟ್ರಿಕ್ಟುಗಳನ್ನು ಕಡಿಮೆ ಮಾಡಿದರೆ ಖರ್ಚುಮಾಡುವುದಕ್ಕಾಗುವುದಿಲ್ಲ. ಬೇರೆ ವಿಧಗಳಲ್ಲಿ ಎಲ್ಲಿ ಖರ್ಚು ಕಡಮೆ ಮಾಡಬೇಕೋ ಅಲ್ಲಿ ಮಾಡಿ. ಸಣ್ಣ ಸಣ್ಣ ಡಿಸ್ಟ್ರಿಕ್ಟುಗಳಿದ್ದರೆ ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ನಡೆಯುತ್ತದೆ. ಡಿಸ್ಟ್ರಿಕ್ಟುಗಳು ಸಣ್ಣ ಸಣ್ಣದಾಗಿರಬೇಕು, ಹಾಗಿದ್ದರೆ ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ನಡೆಯುತ್ತದೆಂದು ಪ್ರೆಸಿಡೆಂಟ್ ಡಾ॥ ರಾಜೇಂದ್ರಪ್ರಸಾದ್‌ರವರು ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿರುವ ಜ್ಞಾಪಕವಿದೆ. ಕೇರಳದಲ್ಲಿ ಕೂಡ ರೀ-ಆರ್ಗನೈಸೇಷನ್ ಆದಮೇಲೆ ಮೂರು ಡಿಸ್ಟ್ರಿಕ್ಟುಗನ್ನು ಜಾಸ್ತಿ ಮಾಡಿದರು. ಕೇರಳದಂಥ ಸಣ್ಣ ಸಂಸ್ಥಾನದಲ್ಲಿ ಕೂಡ ಆಡಳಿತ ದಕ್ಷತೆಯಿಂದ ನಡೆಯಲಿ ಎಂಬ ದೃಷ್ಟಿಯಿಂದ ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಹೆಚ್ಚು ಮಾಡಿದ್ದಾರೆ. ಈ ಎಲ್ಲಾ ಕಾರಣಗಳಿಂದ ಚಿಕ್ಕಮಗಳೂರು ಜಿಲ್ಲೆಯನ್ನು ತೆಗೆದುಹಾಕಬೇಕೆಂಬ ಯೋಚನೆಗೆ ಹೋಗಬಾರದು.

ಚಿಕ್ಕಮಗಳೂರಿಗೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡುವ ವಿಚಾರದಲ್ಲಿ ಮಾತನಾಡಬೇಕಾಗಿದೆ. ಇವತ್ತು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಂತ್ರಿಗಳು ಚಿಕ್ಕಮಗಳೂರು ಮುನಿಸಿಪಾಲಿಟಿಗೆ 15 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೇವೆಂದು ಹೇಳಿದರು. ಸಾಲ ಕೊಟ್ಟ ಮಾತ್ರಕ್ಕೆ ಸರ್ಕಾರದ ಜವಾಬ್ದಾರಿ ಮುಗಿಯಿತೇ ? ಈಗ ಎಷ್ಟೋ ಕಾಲದಿಂದ ಅನೇಕ ಮಂತ್ರಿಗಳು ಚಿಕ್ಕಮಗಳೂರಿಗೆ ಬಂದಿದ್ದರು ; ಹೇಳಿದೆವು, ರೆಪ್ರೆಸೆಂಟೇಷನ್ ಕೊಟ್ಟೆವು ; ಆದರೂ ಕೆಲಸವಾಗಿಲ್ಲ. 15 ಲಕ್ಷ ರೂಪಾಯಿನಲ್ಲಿ ವಾಟರ್ ಸಪ್ಲೈ ಸ್ಕೀಮಿಗೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದಕ್ಕೆ 60 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಜವಾಬು ಕೊಟ್ಟರು. ಇದರಿಂದಲೇ ಸರ್ಕಾರದವರು ಹೆಚ್ಚು ಗಮನ ಕೊಟ್ಟಿಲ್ಲವೆಂದು ತಿಳಿದುಕೊಳ್ಳಬಹುದು. ಮುಂದಿನ ವರ್ಷದಲ್ಲಿ ಪೈಪ್‌ಲೈನ್ ಹಾಕುತ್ತೇವೆಂದು ಹೋದ ವರ್ಷ ಹೇಳಿದ್ದರು. ನಮ್ಮ ಮಂತ್ರಿಗಳು ಟೂರು ಹೋದಾಗ ಆ ಭರವಸೆಕೊಟ್ಟದ್ದು ಏನಾಯಿತು ? ಕೆಲಸ ಏಕಾಗಿಲ್ಲ ? ಜನಗಳ ತೊಂದರೆಯೇನು ಎಂದು ಕೇಳಿದ್ದರೆಯೆ ? ಜನಗಳಿಂದ ರೆಪ್ರೆಸೆಂಟೇಷನ್ ಬಂದರೆ ಅದನ್ನು ಪರ್‌ಸ್ಯೂ ಮಾಡುವ ಹ್ಯಾಬಿಟ್ಟೇ ಅವರಿಗಿಲ್ಲ. ಮಂತ್ರಿಗಳು ಡಿಸ್ಟ್ರಿಕ್ಟ್‌ಗೆ ಬಂದಾಗಲಾಗಲಿ, ತಾಲ್ಲೂಕಿಗೆ ಬಂದಾಗಲಾಗಲಿ, ಕೆಲಸಗಳು ನಿರೀಕ್ಷಿಸಿದ ಕಾಲದಲ್ಲಿ ಏಕೆ ಪೂರೈಕೆಯಾಗಿಲ್ಲ, ಜನಗಳ ತೊಂದರೆಗಳನ್ನು ಸಾಲ್ವ್ ಮಾಡುವುದಕ್ಕೆ ಏನು ಮಾಡಬೇಕೆಂಬುದನ್ನು ಖುದ್ದು ಪರಿಶೀಲಿಸಬೇಕು. ನಮ್ಮ ಡಿಸ್ಟ್ರಿಕ್ಟಿಗೆ ಚನ್ನಬಸಪ್ಪನವರು ರೆವಿನ್ಯೂ ಮಂತ್ರಿಗಳು ಹೆಲ್ತ್ ಮಿನಿಸ್ಟರು, ಪಾಟೀಲರು,

(ಶ್ರೀ ಎ. ಎಂ. ಬಸವೇಗೌಡ)

ಚೀಫ್ ಮಿನಿಸ್ಟರು ಮೊದಲಾಗಿ ಮಾಲ ಮರಿಯಪ್ಪನವರೊಬ್ಬನ್ನೇ ಬಿಟ್ಟು ಪ್ರತಿಯೊಬ್ಬ ಮಂತ್ರಿಗಳೂ ಬಂದಿದ್ದರು. ಆದರೆ ಮೂರು ವರ್ಷದಿಂದ ರೆಪ್ರೆಸೆಂಟೇಷನ್ ಕೊಟ್ಟಿದ್ದರೂ ವಾಟರ್ ಸಪ್ಲೈ ಕೆಲಸ ಏಕೆ ಆಗಿಲ್ಲವೆಂದು ಒಬ್ಬರೂ ವಿಚಾರಿಸಲಿಲ್ಲ. ನಮ್ಮ ಕಷ್ಟ ಹಾಗೆಯೇ ಇದೆ.

ಶ್ರೀ ಟಿ. ಮರಿಯಪ್ಪ.—ನಿಮ್ಮ ಕಷ್ಟವನ್ನೆಲ್ಲಾ ಪರಿಹಾರ ಮಾಡಿದ್ದೇವೆ.

ಶ್ರೀ ಎ. ಎಂ. ಬಸವೇಗೌಡ.—ಕುಡಿಯುವ ನೀರು ಬೇಸಿಕ್ ನೆಸಿಸಿಟಿ; ಅದರ ಕಷ್ಟವನ್ನು ಪರಿಹಾರ ಮಾಡದಿದ್ದರೆ ಏನು ಉಪಯೋಗ ?

ಈ ಬಗ್ಗೆ ನಾನೊಂದು ಪ್ರಶ್ನೆ ಕೇಳಿದೆ. ಅದೇನೆಂದರೆ ಶರಾವತಿ, ನುಗು, ಭದ್ರ ಮುಂತಾದ ಪ್ರಾಜೆಕ್ಟುಗಳಿಂದ ಮುಳುಗಡೆಯಾದ ಕಾಡನ್ನು ಬೇರೆ ಜಾಗಗಳಲ್ಲಿ ಅಫಾರೆಸ್ಟೇಷನ್ ಮಾಡಲು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರೆಂದು. ಫಾರೆಸ್ಟ್ ಇಲಾಖೆಯಿಂದ ಒಳ್ಳೆಯ ಆದಾಯ ಬರುತ್ತಿದೆಯೆಂದು ನೀವು ತಿಳಿದುಕೊಂಡಿರಬಹುದು. 1959–60 ರಲ್ಲಿ 392 ಲಕ್ಷ, 1960-61 ರಲ್ಲಿ 383 ಲಕ್ಷ 1961-62 ರಲ್ಲಿ 373 ಲಕ್ಷ ಫಾರೆಸ್ಟ್‌ನಿಂದ ಆದಾಯವಿದೆ ಆದ್ದರಿಂದ ಫಾರೆಸ್ಟ್ ಇಲಾಖೆಯಿಂದ ವರ್ಷದಿಂದ ವರ್ಷಕ್ಕೆ ಆದಾಯ ಕಡಿಮೆಯಾಗುತ್ತಿದೆ. ಇದನ್ನು ನೋಡಿದರೆ ಫಾರೆಸ್ಟ್ ಏರಿಯಾ ಕಡಮೆಯಾಗುತ್ತಿದೆ. ಇನ್ನು 5 ವರ್ಷಗಳಲ್ಲಿ ನಿಮಗೆ ಫಾರೆಸ್ಟ್‌ನಿಂದ ಒಂದು ಕೋಟಿ ರೂಪಾಯಿ ಕೂಡ ಬರುವುದಿಲ್ಲವೆಂದು ಕಡಾ ಖಂಡಿತವಾಗಿ ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ (ಅರಣ್ಯ ಶಾಖೆಯ ಮಂತ್ರಿಗಳು).—ಯಾವ ಫಿಗರ್ಸ್ ಮೇಲೆ ಹೇಳುತ್ತೀರ?

ಶ್ರೀ ಎ. ಎಂ. ಬಸವೇಗೌಡ.—ಬಜೆಟ್ ಮೆಮೋರ್ಯಾಂಡಮ್‌ನಲ್ಲಿಯೇ ಇದೆ. ಅಫಾರೆಸ್ಟೇಷನ್ ಕೆಲಸಕ್ಕೆ ಬಹಳ ಹೆಚ್ಚಿನ ಗಮನ ಕೊಡಬೇಕು.

ಅಗ್ರಿಕಲ್‌ಚರ್ ಮಿನಿಸ್ಟರಿಗೂ ಗೊತ್ತಿರಬೇಕು; ಶ್ರೀ ರುದ್ರಪ್ಪನವರಿಗೂ ಗೊತ್ತಿರಬಹುದು. ನಮ್ಮ ಕಡೆ ಬತ್ತದ ಪೈರಿಗೆ ಹುಳು ಬಿದ್ದು ಶೇಕಡ 25-30 ರಷ್ಟು ನಾಶವಾಗಿದೆ. ಭತ್ತವನ್ನು ಹುಳು ಕೊರೆಯುತ್ತಿರುವುದನ್ನು ನಿಲ್ಲಿಸಲು ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನವರು ರೆಮಿಡಿ ಕಂಡುಹಿಡಿಯದೆ ಇರುವುದು ಬಹಳ ಶೋಚನೀಯ.

Sri H. S. RUDRAPPA.—Now, it is brought under control.

ಶ್ರೀ ಎ. ಎಂ. ಬಸವೇಗೌಡ.—ಔಷಧಿಗಳನ್ನು ಎಲ್ಲಾ ಕಡೆಯ ರೈತರಿಗೂ ಹಂಚಬೇಕು. ಎಲ್ಲೋ ಒಂದು ಕಡೆ ಕಂಟ್ರೋಲ್ ಮಾಡಿ ಸುಮ್ಮನೆ ಕೂತುಬಿಟ್ಟರೆ ಏನು ಪ್ರಯೋಜನ ? ಶಿವಮೊಗ್ಗದಲ್ಲಿ ಕಂಟ್ರೋಲ್ ಮಾಡಿರಬಹುದು ನಮ್ಮ ಡಿಸ್ಟ್ರಿಕ್ಟಿನಲ್ಲಿ ಬತ್ತದ ಪೈರು ನಾಶವಾಗುತ್ತಿದೆ; ಪೂರ್ತಿ ಬತ್ತ ಹಾಳಾಗುವುದಕ್ಕೆ ಮುಂಚೆ ಔಷಧಿಗಳನ್ನು ಹಂಚಬೇಕು. ಫುಡ್ ಪ್ರೊಡಕ್ಷನ್ನಿಗೆ ಅತ್ಯವಶ್ಯಕವಾಗಿ ಬೇಕಾದ ಗೊಬ್ಬರ ಮತ್ತು ಗೋಡನ್ನು ಸರ್ಕಾರದವರು ಸಕಾಲದಲ್ಲಿ ಸಪ್ಲೈ ಮಾಡುವುದಿಲ್ಲ. ನಾವು ಈಸಭೆಯಲ್ಲಿ ಒತ್ತಾಯ ಮಾಡಿದಾಗ, ಪ್ರತಿಯೊಂದು ಸಾರಿಯೂ ಸರ್ಕಾರದವರು ಗೋಡೌನ್ ಡಿಫಿಕಲ್ಟಿ ಗೂಡ್ಸ್ ವ್ಯಾಗನ್ ಡಿಫಿಕಲ್ಟಿ ಇತ್ಯಾದಿ ಹೇಳುತ್ತಾರೆಯೇ ವಿನ ಅವುಗಳನ್ನು ಸಾಲ್ವ್ ಮಾಡುವುದಕ್ಕೆ ಫಲಕಾರಿಯಾದ ಏನು ಕಾರ್ಯಕ್ರಮವನ್ನು ತೆಗೆದುಕೊಂಡಹಾಗಿಲ್ಲ. ಅಮೋನಿಯಂ ಸಲ್ಫೇಟ್ ಸೊಸೈಟಿಗಳಿಗೆ ಹೋದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಬಂದಿದೆ. ನೀವು ಸಕಾಲದಲ್ಲಿ ಫರ್ಟಿಲೈಜರ್ಸ್ ಸಪ್ಲೈ ಮಾಡದಿದ್ದರೆ ಫುಡ್ ಪ್ರೊಡಕ್ಷನ್ ಎಷ್ಟರಮಟ್ಟಿಗೆ ಜಾಸ್ತಿ ಮಾಡಬಹುದೆಂದು ಊಹಿಸಬಹುದು. ಗೂಡ್ಸ್ ವ್ಯಾಗನ್ ಕಷ್ಟವನ್ನು ಸೆಂಟ್ರಲ್ ಗವರ್ನ್‌ಮೆಂಟಿನಲ್ಲಿ ಸಂಬಂಧಪಟ್ಟವರನ್ನು ನೋಡಿ ಪರಿಹರಿಸುವುದಕ್ಕಾಗುವುದಿಲ್ಲವೇ? ಇವತ್ತು ಫುಡ್ ಪ್ರೊಡಕ್ಷನ್ ಹೆಚ್ಚಾಗಬೇಕೆಂದು ಬರೀ ಬಾಯಿನಲ್ಲಿ ಹೇಳಿದರೆ ಆಗುತ್ತಯೇ? ಸೆಂಟ್ರಲ್ ಗವರ್ನ್‌ಮೆಂಟನವರ ಹತ್ತಿರ ಕೂಲಂಕುಷವಾಗಿ

ವಿಚಾರವಿನಿಮಯ ನಡೆಸಿ ರೈತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಸಕಾಲದಲ್ಲಿ ಒದಗಿಸಿ ಕೊಡುವುದು ಸರ್ಕಾರದ ಕರ್ತವ್ಯ. ಇಲ್ಲದೆ ಹೋದರೆ ಫುಡ್ ಪ್ರೊಡಕ್ಷನ್ ಹೆಚ್ಚಾಗುವುದಿಲ್ಲ, ಆಹಾರದ ಪರಿಸ್ಥಿತಿ ಸುಧಾರಿಸುವುದಿಲ್ಲ. ಫುಡ್ ಪ್ರೈಸಸ್ ಕಡಿಮೆ ಇದೆಯೆಂದು ಮಂತ್ರಿಗಳು ಹೇಳುತ್ತಾರಲ್ಲ! ಅದರಲ್ಲಿ ಯಾರಾದರೂ ಮಾರ್ಕೆಟ್ಟುಗಳಿಗೆ ಹೋಗಿ ಬೆಲೆಗಳು ಜಾಸ್ತಿಯಾಗಿದೆಯೇ; ಕಡಿಮೆಯಾಗಿದೆಯೇ ಎಂದು ತಾವೇ ಕೇಳಿದ್ದಾರೆಯೇ? ರೂಪಾಯಿಗೆ 1½ ಸೇರು ಅಕ್ಕಿ ಸಿಗುತ್ತದೆಂದು ಹೇಳುತ್ತೀರಿ. ಫೇರ್ ಪ್ರೈಸ್ ಡಿಪೋನಲ್ಲಿ ಸಿಗುವ ಅಕ್ಕಿಯನ್ನು ಯಾರೂ ತಿನ್ನುವುದಕ್ಕೆ ಇಷ್ಟ ಪಡುವುದಿಲ್ಲ. ಮಧ್ಯಪ್ರದೇಶದ ಅಕ್ಕಿಯಲ್ಲಿ ಕಲ್ಲು ಮಣ್ಣು ಹೆಚ್ಚಾಗಿದೆ.

ಇನ್ನು ನಾನೀಗ ಬಹಳ ಮುಖ್ಯವಾಗಿ ಹೇಳಬೇಕಾಗಿರುವುದೇನೆಂದರೆ–ಖೋತಾ ಬಡ್ಜೆಟ್ಟನ್ನು ಮಂಡಿಸುವುದೊಂದರಲ್ಲಿ ಮಾತ್ರ ನಮ್ಮ ಹಣಕಾಸಿನ ಸಚಿವರು ಘಟ್ಟಿಗರೇ ವಿನಾ ಇವರ ಕೈಲಿ ಇಲ್ಲಿಯವರೆಗೂ ಆಹಾರ ಧಾನ್ಯಗಳ ಬೆಲೆಯನ್ನು ನಿಗದಿ ಮಾಡಲು ಸಾಧ್ಯವಾಗಿಲ್ಲ...

ಶ್ರೀ ಟಿ. ಮರಿಯಪ್ಪ.—ಈಗ ತಾವು ಹೇಳುತ್ತಿರುವುದು ಸ್ಟೇಟ್ ಸಬ್‌ಜೆಕ್ಟಲ್ಲ, ಈ ವಿಚಾರದಲ್ಲಿ ಸ್ಟೇಟಿಗೆಷ್ಟು ಪವರ್ಸಿದೆ ಎಂಬುದನ್ನು ನೋಡಿ ಮಾತನಾಡಿ.

ಶ್ರೀ ಎ. ಎಂ. ಬಸವೇಗೌಡ.—ಫೇರ್-ಪ್ರೈಜ್ ಡಿಪೋಗಳನ್ನಾದರೂ ಇವರು ಕ್ರಮವಾಗಿ ಚೆಕ್ ಮಾಡುತ್ತಿದ್ದಾರೇನು? ಅದೂ ಕೂಡ ಇಲ್ಲ. ಇನ್ನೂ ಹೀಗೇ ಹೇಳುವುದಾದರೆ ಲ್ಯಾಂಡ್ ರೆವಿನ್ಯೂನಲ್ಲಿ ವಸೂಲಾಗದೆ ಉಳಿದಿರತಕ್ಕ ಬಾಕಿ 2 ಕೋಟಿ ರೂಪಾಯಿಗಳಿಗೂ ಮೀರಿದೆ. ಹಾಗೇ ಸೇಲ್ಸ್‌ಟ್ಯಾಕ್ಸ್ ಮತ್ತು ಎಕ್ಸೈಜ್ ತೆರಿಗೆಗಳಲ್ಲಿ ನಿಂತಿರುವ ಬಾಕಿ 23 ಕೋಟಿ ರೂಪಾಯಿಗಳಿಗೆ ಬರುತ್ತೆ. ಈ ಬಾಕಿಗಳನ್ನೆಲ್ಲ ವಸೂಲ್ಮಾಡುವುದಕ್ಕೆ ಸರ್ಕಾರದವರೇನು ಏರ್ಪಾಡು ಮಾಡಿದ್ದಾರೆ?

ಶ್ರೀ ಟಿ. ಮರಿಯಪ್ಪ.—ಸೇಲ್ಸ್‌ಟ್ಯಾಕ್ಸ್-ಲ್ಯಾಂಡ್ ರೆವಿನ್ಯೂನಲ್ಲಿ ಶೇ. 90 ರಷ್ಟನ್ನು ವಸೂಲ್ಮಾಡಿದ್ದೇವೆ. ಆದರೆ ಎಕ್ಸೈಜ್ ತೆರಿಗೆ ಬಗ್ಗೆ ಕೆಲವು ಕೋರ್ಟಿನಲ್ಲಿ ಸ್ಟೇ ಆರ್ಡರಾಗಿರುವುದರಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಎ. ಎಂ. ಬಸವೇಗೌಡ.—ತಾವು ಕೊಟ್ಟಿರತಕ್ಕ ಹೇಳಿಕೆಗಳಲ್ಲೇ ಗುಲ್ಬರ್ಗ ಡಿವಿಜನ್ನಿನಲ್ಲಿ ಈ ಬಾಕಿಗಳೆಲ್ಲ ಜಾಸ್ತಿ ನಿಂತಿರುತ್ತವೆಂದು ತಿಳಿದುಬಂದಿದೆ. ಆ ನಿಮ್ಮ ಹೇಳಿಕೆಯಲ್ಲಿ ತಿಳಿಸಿದ್ದ ವಿಚಾರವನ್ನೇ ನಾನೀಗ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಆ ಗುಲ್ಬರ್ಗ ಡಿವಿಜನ್ ಒಂದನ್ನು ಬಿಟ್ಟು ಬೇರೆ ಕಡೆಗಳಲ್ಲೆಲ್ಲ ಫಸ್ಟ್‌ಕ್ಲಾಸ್ ವಸೂಲು ಆಗಿದೆ.

ಶ್ರೀ ಎ. ಎಂ. ಬಸವೇಗೌಡ.—ಇನ್ನು ಈ ಟೆಕ್ನಿಕಲ್ ವಿದ್ಯಾಭ್ಯಾಸದ ವಿಚಾರದಲ್ಲಿ–ಆಟೋಮೋಬೈಲ್ ಮತ್ತು ಟೈಲರಿಂಗ್ ಇಂಥ ಕೆಲವು ಬಾಬುಗಳನ್ನು ಅಲ್ಲಲ್ಲೇ ತೆರೆಯಬೇಕೆಂದು ಒತ್ತಾಯ ಮಾಡುತ್ತಿದ್ದರೂ ಸರ್ಕಾರ ಈ ವಿಚಾರಕ್ಕೆ ಗಮನವನ್ನೇ ಕೊಡುತ್ತಿಲ್ಲ. ಯಾವುದೋ ಒಂದು ಕಾಲದಲ್ಲಿ ಸರ್ಕಾರದವರು ಏನೊಂದು ಈ ಸಿವಿಲ್-ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಬಾಬುಗಳನ್ನು ಪ್ರಾರಂಭಿಸಲಾಗಿತ್ತೋ ಅವುಗಳನ್ನೇ ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ಹೆಣ್ಣುಮಕ್ಕಳಿಗೆ ಅನುಕೂಲವಾಗಲು ಎಲ್ಲ ಕಡೆಗಳಲ್ಲೂ ಟೈಲರಿಂಗ್ ಸ್ಕೂಲುಗಳನ್ನು ಪ್ರಾರಂಭಿಸಬೇಕಾದ್ದು ಅತ್ಯಗತ್ಯ.

ಇನ್ನು ಸ್ಲಂ ಕ್ಲಿಯರೆನ್ಸ್ ವಿಚಾರಕ್ಕೆ ಬಂದರೆ..

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ಕೇವಲ ಹೆಣ್ಣುಮಕ್ಕಳಿಗಾಗೇ ಹಳೇ ಮೈಸೂರು ಭಾಗದಲ್ಲಿ ಕೆಲವು ಟ್ರೈನಿಂಗ್‌ಗಳನ್ನು ಏರ್ಪಡಿಸಲಾಗಿದೆ. ಆದರೆ ಈಗ ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗಂಡುಮಕ್ಕಳು–ಹಾಗೂ ಹೆಣ್ಣುಮಕ್ಕಳಿಗೆ ಒಟ್ಟಿಗೆ ಆಲ್ ಇಂಡಿಯಾ ಪ್ಯಾಟರ್ನಿನ ಪ್ರಕಾರ ಪ್ರತಿಯೊಂದು ಪಾಲಿಟೆಕ್ನಿಕ್ ಪಾಠಶಾಲೆಯಲ್ಲೂ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಟೈಲರಿಂಗ್ ಶಾಖೆಯನ್ನು ತೆರೆಯಬೇಕೆಂದಿದೆ.

ಶ್ರೀ ಎ. ಎಂ. ಬಸವೇಗೌಡ.—ಹಾಗಾದರೆ ಮೊದಲು ಆ ಅವಕಾಶವನ್ನು ನಮ್ಮ ಚಿಕ್ಕಮಗಳೂರಿಗೆ ಕೊಡಿ. ಈಗ ನಾನು ಸ್ಲಂ ಕ್ಲಿಯರೆನ್ಸ್ ವಿಚಾರ ಮಾತನಾಡುತ್ತಿದ್ದೆ. ಈ ದಿವಸ ಯಾರೇ ಆಗಲಿ ಕಡೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಬಂದರೆ ಆ ರಾಜಾಜಿನಗರದ ಪಕ್ಕದಲ್ಲಿ—ರೈಲ್ವೆ ಲೈನಿನ ಬಳಿ ಎಷ್ಟೊಂದು ಸ್ಲಂ ಬಿದ್ದಿದೆಯೆಂಬುದನ್ನು ಮಂತ್ರಿಗಳ್ಯಾರಾದರೂ ಅಲ್ಲಿಗೆ ಹೋಗಿ ನೋಡಿದ್ದೀರಾ? ಹಾಗೆ ನೋಡಿದ್ದರೆ ಇವರೇನು ಆ ಬಗ್ಗೆ ಕಾರ್ಯಕ್ರಮ ಕೈಗೊಂಡಿದ್ದಾರೆ? ಈ ಬಗ್ಗೆ ಕೇಂದ್ರದಿಂದ ಬಂದ ಗ್ರಾಂಟ್ ಹಣವೆಲ್ಲ ಲ್ಯಾಪ್ಸಾಗುತ್ತಿದೆ. ಈ ಸ್ಲಂ ಕ್ಲಿಯರೆನ್ಸ್ ಬಗ್ಗೆ ಸರ್ಕಾರ ಕೂಡಲೇ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗ ಮುನಿಸಿಪಾಲಿಟಿಗಳ ಮೇಲೆ ಇಲ್ಲಿಯತನಕ ಇದ್ದ ಸರ್ಕಾರದ ಕಂಟ್ರೋಲನ್ನು ತಪ್ಪಿಸಿರುವುದರಿಂದ ಇವುಗಳ ಆಡಳಿತ ಹದಗೆಡುತ್ತಿದೆಯೆಂದು ತಿಳಿಸಲು ನನಗೆ ವ್ಯಸನವಾಗುತ್ತದೆ. ಈ ದಿವಸ ನಮ್ಮ ನಗರದಲ್ಲಿ ಕಸ ಗುಡಿಸತಕ್ಕವರಿಲ್ಲ. ಹೆಲ್ತ್ ಇಲಾಖೆ ಇದೆ. ಆಫೀಸರುಗಳಿದ್ದಾರೆ. ಅವರ ನಿಗವೆಲ್ಲ ಮಸಾಲೆದೋಸೆ ಹಾಕತಕ್ಕ ಹೋಟಲುಗಳ ಮೇಲೆ ಬಿದ್ದಿದೆಯೇ ವಿನಾ ಈ ರಸ್ತೆಗಳ ನೈರ್ಮಲ್ಯದ ಕಡೆಗೆ ಅವರ ಕಣ್ಣು ಬೀಳದಿರುವುದು ಶೋಚನೀಯ. ಈ ವಿಚಾರಕ್ಕೆ ಇನ್ನಾದರೂ ಈ ಇಲಾಖೆಯವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಹೆಚ್ಚು ಕಾಲಾವಕಾಶವಿಲ್ಲದ್ದರಿಂದ ಇಷ್ಟಕ್ಕೇ ಮುಗಿಸುತ್ತೇನೆ.

†ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೇ–1961-62ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತ ನಾನೀಗ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಯಾವ ಒಂದು ದೇಶದಲ್ಲೇ ಆಗಲಿ, ಆ ದೇಶ ಅಭಿವೃದ್ಧಿಗೆ ಬರಬೇಕಾದರೆ ಆ ದೇಶದಲ್ಲಿರತಕ್ಕ ಪ್ರತಿಯೊಂದು ಜನಾಂಗವೂ–ರಾಜಕೀಯ–ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಮುಂದೆ ಬಾರದಿದ್ದರೆ ಆ ದೇಶ ಅಭಿವೃದ್ಧಿಗೆ ಬಂದಂತೆ ಆಗಲಿಲ್ಲ ಎಂಬುದು ಸ್ವಾಭಾವಿಕವಾಗೇ ಇದೆ. ಈ ದಿವಸ ಮಾನ್ಯ ಹಣಕಾಸಿನ ಸಚಿವರು ಬಹಳ ಬುದ್ಧಿವಂತಿಕೆಯಿಂದ ಈ ಬಡ್ಜೆಟ್ಟನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಆದರೆ ಇಲ್ಲಿಗೆ 25 ವರ್ಷಗಳ ಕೆಳಗೆ ನಮ್ಮ ಸಂಸ್ಥಾನದ ವರಮಾನ 3–3½ ಕೋಟಿ ರೂಪಾಯಿಗಳಷ್ಟು ಮಾತ್ರವಿತ್ತು. ಆದರೆ ಈ ದಿವಸ ನಮ್ಮ ರಾಜ್ಯ ಆರ್ಥಿಕವಾಗಿ ಬಹಳ ಮುಂದೆ ಬಂದಿದೆ ಎಂದು ಹೇಳುತ್ತಿದ್ದೇವೆ. ಆದರೆ ಈ ದಿವಸ ನಮ್ಮ ರಾಜ್ಯ ಎಷ್ಟರಮಟ್ಟಿಗೆ ಈ ಆರ್ಥಿಕಸ್ಥಿತಿಯಲ್ಲಿ ಮುಂದುವರಿದಿದೆ ಎಂದರೆ ನಾವು ನಮ್ಮ ನೌಕರರಿಗೆ ಒಂದು ಹೆಚ್ಚಿನ ಮಟ್ಟದಲ್ಲಿ ಸಂಬಳಸಾರಿಗೆ ಕೊಡುವಷ್ಟರ ಮಟ್ಟಿಗೆ ನಮ್ಮ ದೇಶ ಅಭಿವೃದ್ಧಿಗೆ ಬಂದಿದೆಯೆಂದು ಹೇಳಬಹುದಾಗಿದೆ. ಆದರೆ ಈ ಒಂದು ಬಾಬು ವಿನಾ ಮತ್ತೆ ದೇಶದಲ್ಲಿ ಇನ್ನಾವ ಅಭಿವೃದ್ಧಿ ಕೆಲಸಗಳೂ ಆಗಿರುವುದಿಲ್ಲವೆಂಬುದನ್ನು ನಾವೂ ಮತ್ತು ಸರ್ಕಾರದವರೂ ಉಭಯತ್ರರೂ ಒಪ್ಪಲೇಬೇಕಾದ ವಿಷಯವಾಗಿದೆ. ಆದರೆ ಇನ್ನಾದರೂ ಸರ್ಕಾರದವರು ದೇಶಾಭಿವೃದ್ಧಿ ಕಾರ್ಯಗಳ ಕಡೆಗೆ ಹೆಚ್ಚಿನ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿರತಕ್ಕ ಒಟ್ಟು ಜನಸಂಖ್ಯೆಯಲ್ಲಿ ಶೇ. 75-80 ರಷ್ಟು ಜನರು ಗ್ರಾಮಾಂತರ ವಾಸಿಗಳಾಗಿದ್ದುಕೊಂಡು ವ್ಯವಸಾಯದ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಇನ್ನುಳಿದ ಶೇ. 25ರಷ್ಟು ಜನರು ಮಾತ್ರ ನಗರಗಳಲ್ಲಿರುತ್ತಾರೆ. ಈ ನಗರಗಳಲ್ಲಿ ವಾಸ ಮಾಡುತ್ತಿರುವ ಶೇ. 25ರಷ್ಟು ಜನಗಳಿಗೆ ಮಾತ್ರ ಎಲ್ಲ ಸೌಲಭ್ಯಗಳೂ ಇರುತ್ತವೆ. ಹಳ್ಳಿಯವರ ಪಾಡನ್ನು ದೇವರೇ ಕಾಪಾಡಬೇಕು! ಈ ದಿವಸ ಯಾವುದಾದರೊಂದೂ ಹಳ್ಳಿಗೊಂದು ಪಾಠಶಾಲೆಯನ್ನು ಕೊಡಿ ಎಂತ ಕೇಳಿದರೆ ಅದಕ್ಕೆ ಸರ್ಕಾರದವರು ಹಳ್ಳಿಯವರು ಅವರ ಷೇರ್ಪನ್ನು ಹಣವನ್ನು ಕೊಟ್ಟರೆ ನಾವು ನಮ್ಮ ಭಾಗದ ಹಣವನ್ನು ಕೊಡುತ್ತೇವೆ

ಎಂತ ಹೇಳುತ್ತಾರೆ. ಆದರೆ ಸರ್ಕಾರದವರು ಈ ದಿವಸ ಪಟ್ಟಣದಲ್ಲಿ ವಾಸ ಮಾಡತಕ್ಕ ಜನರಿಂದ ಯಾವ ಫೋರ್ಷನ್ ಹಣವನ್ನು ಕೇಳದೆ ನಗರದ ಮೂಲೆ ಮೂಲೆಗಳಲ್ಲೆಲ್ಲಾ ಸ್ಕೂಲುಗಳನ್ನು ಪ್ರಾರಂಭಿಸುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಹಿಂದೆ ಇಲ್ಲಿಗೆ 20-25 ವರ್ಷಗಳ ಕೆಳಗೆ ರಾಜ್ಯಾಡಳಿತವು ಹೇಗೆ ನಡೆಯುತ್ತಿತ್ತೋ ಈಗಲೂ ಹಾಗೇ ನಡೆಯುತ್ತಿದೆ. ಈ ದಿವಸ ನಾವು ಈ ಸಭೆಯಲ್ಲೇ ಅನೇಕಾವರ್ತಿ ಈ ಗ್ರಾಮಾಂತರ ಪ್ರದೇಶಗಳ ಜನರ ಬಗ್ಗೆ ಸರ್ಕಾರ ತನ್ನ ಮನೋಭಾವವನ್ನು ಸ್ವಲ್ಪವಾದರೂ ಮಾರ್ಪಾಡು ಮಾಡಿಕೊಳ್ಳ ಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅದು ಫಲಕಾರಿಯಾಗಿಲ್ಲ. ಮಂತ್ರಿಗಳು ದೇಶದಲ್ಲೆಲ್ಲಾ ಸಂಚಾರ ಮಾಡುತ್ತಿದ್ದಾರೆ. ಅವರಿಗೆ ಈ ಹಳ್ಳೀ ಜನರ ಜೀವನ ಎಷ್ಟು ಭಯಂಕರವಾಗಿದೆ, ಅವರು ಹೇಗೆ ತೊಂದರೆಗಳನ್ನು ಅನುಭವಿಸುತ್ತಿದ್ದಾರೆಂಬುದನ್ನೆಲ್ಲಾ ನೋಡಿರುತ್ತಾರೆ. ಅವರಿಗೆ ಸರಿಯಾದ ಮಳೆ-ಬೆಳೆಗಳಿಲ್ಲ ಹೊಟ್ಟೆಗಾಗಿ ಅವರು ಸಾಲ ಮಾಡಬೇಕಾಗಿದೆ. ಸಾಲ ತೀರಿಸುವುದಕ್ಕೆ ಯತ್ನವಿಲ್ಲದೆ, ಹೊಸ ಸಾಲ ಹುಟ್ಟದೆ ಅವರ ಜೀವನ ಬಹಳ ಚಿಂತಾಜನಕವಾಗಿದೆ. ಈಗಲಾದರೂ ಮಂತ್ರಿಗಳು ಈ ಜನರ ಬಗ್ಗೆ ಸಾಕಷ್ಟು ಸಹಾನುಭೂತಿ ತೋರಿಸದೆ ಹೋದರೆ ಬಹಳ ತೊಂದರೆಗಳಾಗುತ್ತವೆ. ಆದರೆ ಈ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ಮಳೆ ಬೀಳುತ್ತಿಲ್ಲ. ಅಂಥಾ ಕಡೆಗಳಲ್ಲೆಲ್ಲಾ ಈಗ ಬೇಸಾಯ ಮಂತ್ರಿಗಳು ಕಾಂಟೂರ್ ಬಂಡುಗಳನ್ನು ಕಟ್ಟಿಸಲು ಕ್ರಮ ಕೈಗೊಂಡಿದ್ದಾರೆ. ಇದರಿಂದ ಅಲ್ಲಲ್ಲೇ ನೀರನ್ನು ನಿಲ್ಲಿಸಲು ಸ್ವಲ್ಪ ಅನುಕೂಲವಾಗುತ್ತದೆ.

5-30 P.M.

ಮುಖ್ಯವಾಗಿ ದೇಶದಲ್ಲಿ ಹೆಚ್ಚು ಉತ್ಪತ್ತಿ ಆಗುವದಕ್ಕೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಲು ಗಮನ ಕೊಡಬೇಕೆಂಬು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರ. ದೇಶದಲ್ಲಿ ಇವತ್ತಿನ ದಿವಸ ಹಿಂದುಳಿದ ವರ್ಗದಲ್ಲಿ ವಿದ್ಯಾವಂತರು ಶೇಕಡ 10ರಷ್ಟು ಕೂಡ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಿಂದುಳಿದ ವರ್ಗದವರಿಗೆ ಹತ್ತು ಹದಿನೈದು ವರ್ಷಗಳ ಹಿಂದೆ ಏನು ಸೌಲಭ್ಯ ಕೊಡುತ್ತಿದ್ದರೋ ಅದನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕೊಡುವ ಸ್ಕಾಲರ್‌ಷಿಪ್ ಅತಿ ಕಡಿಮೆ ಪ್ರಮಾಣದ್ದಾಗಿದೆ. ಅನೇಕ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ದೊರೆಯುವದಿಲ್ಲ. ಆದುದರಿಂದ ಈ ಹಣವನ್ನು ಇನ್ನೂ ಹೆಚ್ಚಿಸಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಷ್ಟೇ ಒದಗಿಸಿ ಕೊಟ್ಟರೆ ಸಾಲದು. ಇದು ಗ್ರಾಮಾಂತರ ಪ್ರದೇಶದಲ್ಲಿಯೂ ಸಹ ದೊರೆಯುವಂತೆ ಮಾಡಬೇಕಾಗಿದೆ. ಈ ಹಿಂದುಳಿದ ವರ್ಗದವರಿಗೆ ಇನ್ನೊಂದು ಗಂಡಾಂತರ ಬಂದಿದೆ. ಅದೇನೆಂದರೆ ವಾರ್ಷಿಕ ಆದಾಯದ ಉತ್ಪತ್ತಿ 1200 ರೂಪಾಯಿ ಮೇಲೆ ಇದ್ದರೆ ಅಂಥವರಿಗೆ ಈ ಸ್ಕಾಲರ್‌ಷಿಪ್ ಕೊಡಕೂಡದೆಂದು ಆಜ್ಞೆ ಬಂದಿದೆ. ಇದರಿಂದ ಅವರಿಗೆ ಅನ್ಯಾಯವಾಗಿದೆ. ಮಂತ್ರಿಗಳು ಇದನ್ನು ಪುನರಾಲೋಚಿಸ ಬೇಕು. ಒಂದು ವೇಳೆ ಒಬ್ಬನಿಗೆ 1200 ರೂ. ವಾರ್ಷಿಕ ಆದಾಯವಿದ್ದರೆ ಅಂಥವನ ಮೇಲೆ ಅವಲಂಬಿಸಿಕೊಂಡು ಇರತಕ್ಕ ಜನ ಅನೇಕರು ಇರುತ್ತಾರೆ. ಆದಕಾರಣ ಫೀಜ್ ಕೊಡುವುದು ಸಾಧ್ಯವಾಗುವದಿಲ್ಲ. ಇಷ್ಟೇ ಅಲ್ಲದೆ ಇಂಥ ಜನ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಹೆಚ್ಚಾಗಿ ಎಲ್ಲರೂ ಬಡತನದಲ್ಲಿಯೇ ಇದ್ದಾರೆ. ಹಿಂದುಳಿದ ವರ್ಗದ ಬಡವರಿಗೆ ಆಗುವ ಈ ಅನ್ಯಾಯವನ್ನು ನಿವಾರಣೆ ಮಾಡಬೇಕು. ಬಡತನದ ಮೂಲಕ ಸ್ಕೂಲು ಫೀಜು ಕೊಡಲು ಸಾಧ್ಯವಾಗುವದಿಲ್ಲ. ಫೀಜ್ ಕೊಡಬೇಕೆಂದರೆ ಅವರ ಮಕ್ಕಳು ಶಿಕ್ಷಣ ಪಡೆಯ ಲಾರರು. ಆದ್ದರಿಂದ ಸರ್ಕಾರದವರು ಇದಕ್ಕೆ ಕೂಡಲೇ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

(ಶ್ರೀ ಟಿ. ಹನುಮಯ್ಯ)

ಸ್ವಾಮಿ, ಹಳ್ಳಿಗಾಡಿನಲ್ಲಿ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕಾಗಿದೆ. ಗ್ರಾಮ ಕೈಗಾರಿಕೆಗಳ ಮೂಲಕ ಹಳ್ಳಿಗಾಡಿನಲ್ಲಿಯ ಬಡವರು ಜೀವನ ಮಾಡಲು ಸಾಧ್ಯವಾಗುತ್ತದೆ. ಹಿಂದುಳಿದ ವರ್ಗದವರ ಸಲುವಾಗಿ ಯಾವ ಗ್ರಾಮ ಕೈಗಾರಿಕೆಯನ್ನು ಸ್ಥಾಪಿಸಿಲ್ಲ. ಕೈಮಗ್ಗ ಮತ್ತು ತೆಂಗಿನನಾರು ಈ ಕೈಗಾರಿಕೆಗಳಿಗೆ ಅಷ್ಟೇ ಉತ್ತೇಜನ ದೊರೆಯುತ್ತಿದೆ. ಹರಿಜನರ ಉದ್ಯೋಗವಾಗಿರುವ ಚರ್ಮದ ಕೈಗಾರಿಕೆಗೆ ಹೆಚ್ಚಿನ ಪ್ರಮಾಣದಲ್ಲಿ ಉತ್ತೇಜನ ಕೊಡಬೇಕು. ಈ ಜನರು ತಮ್ಮ ಕಾಲಮೇಲೆ ತಾವು ನಿಂತುಕೊಳ್ಳುವ ಹಾಗೆ ಮಾಡಬೇಕು. ಆದುದರಿಂದ ಮುಖ್ಯವಾಗಿ ಹರಿಜನರ ಆರ್ಥಿಕಮಟ್ಟ ಸುಧಾರಿಸುವದಕ್ಕೆ ಏನೇನು ಯೋಜನೆ ಮಾಡಬೇಕು ಎಂಬುದಕ್ಕೆ ಸಲಹೆ ಮಾಡುತ್ತೇನೆ.

ಸ್ವಾಮಿ, ಮುಖ್ಯವಾಗಿ ಅರಣ್ಯ ಇಲಾಖೆಯಲ್ಲಿ ತಂಗಡಿ ಚಕ್ಕೆ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ. ಇದನ್ನು ಪದೇ ಪದೇ ಸರ್ಕಾರದವರಲ್ಲಿ ಹೇಳುತ್ತ ಬಂದಿದ್ದೇನೆ. ದೇಶದಲ್ಲಿರುವ ಆಡಳಿತಗಾರರು ಮತ್ತು ಅಧಿಕಾರಿಗಳು ಎಷ್ಟೋ ಬದಲಾವಣೆ ಮಾಡಿ, ಹರಿಜನರಿಗೆ ಸಂಭಂಧಪಟ್ಟಿರುವ ಕೈಗಾರಿಕೆಗಳ ಬಗ್ಗೆ ಮಾತ್ರ ಬದಲಾವಣೆ ಮಾಡದೇ ಹಳೆಯ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಹಳೆಯ ಪದ್ಧತಿ ಎಂದರೆ ಹರಾಜು ಮಾಡುವುದು. ಹಿಂದಿನ ಕಾಲದಿಂದಲೂ ಹರಿಜನರು ಮುಂದೆ ಬರಬಾರದೆಂದು ಅವರು ಮಾಡುವ ಕೈಗಾರಿಕೆಗಳನ್ನೆಲ್ಲ ಇವರೇ ಮಾಡುತ್ತಿದ್ದಾರೆ. ನಮ್ಮಲ್ಲಿ ಹಣವಿಲ್ಲದೇಯಿರುವುದರಿಂದ ಇತರರು ನಮ್ಮನ್ನು ಮುಂದೆ ಬರದಹಾಗೆ ಮಾಡುತ್ತಿದ್ದಾರೆ, ಸರ್ಕಾರ ಇದನ್ನೆಲ್ಲ ಆಲೋಚನೆ ಮಾಡಿ ನಮಗೂ ದುಡ್ಡನ್ನು ಕೊಟ್ಟರೆ ನಾವೇ ಈ ಕೈಗಾರಿಕೆಗಳನ್ನು ನಡೆಸಲು ನಾವೇ ಮುಂದೆ ಬರುತ್ತೇವೆ.

ಹರಿಜನರು ಒಂದು ಬಸ್ ಲೈನ್ ತೆಗೆದುಕೊಂಡಿದ್ದಾರೆಯೇ ? ಅವರಿಗೆ ದುಡ್ಡು ಕೊಟ್ಟು ಸಹಾಯ ಮಾಡಿದರೆ ತಾನೆ ? ಅವರು ಪ್ರತಿಯೊಂದು ಕೈಗಾರಿಕೆಯಲ್ಲಿಯೂ ಮತ್ತು ವ್ಯವಸಾಯದಲ್ಲಿ ಪ್ರತಿಯೊಂದರಲ್ಲಿಯೂ ಮುಂದೆ ಬರಬೇಕಾದರೆ ಸರ್ಕಾರದವರು ಸಹಾಯ ಮಾಡಿದರೆ ಮಾತ್ರ ಮುಂದೆ ಬರುತ್ತಾರೆ.

ಶ್ರೀ ವೈ. ವೀರಪ್ಪ.—ಬಸ್ ಲೈನ್ ಹಾಕಬೇಕಾದರೆ ಸರ್ಕಾರದವರು ದುಡ್ಡು ಕೊಡಬೇಕೆಂದು ಹೇಳುತ್ತೀರಾ ?.

ಶ್ರೀ ಟಿ. ಹನುಮಯ್ಯ.—ನಮ್ಮಲ್ಲಿ ದುಡ್ಡು ಇದ್ದರೆ ನಾವೂ ಸವಾಲು ಮಾಡುತ್ತಿದ್ದೆವು. ನಮಗೆ ದುಡ್ಡು ಬರುವುದಕ್ಕೆ ಮಾರ್ಗ ಮಾಡಿಕೊಡಿರಿ. ನಮಗಿರತಕ್ಕ ಕೈಗಾರಿಕೆಗಳನ್ನು ನಮ್ಮ ಕೈಗೆ ಕೊಟ್ಟರೆ, ನಿಮ್ಮಂಥವರಲ್ಲ ಹೊಡೆದುಕೊಂಡು ಹೋಗುತ್ತಾರೆ. ನಮಗೂ ಕೈಯಲ್ಲಿ ದುಡ್ಡು ಇರುವಹಾಗೆ ಮಾಡಿದರೆ ನಾವೂ ಮುಂದೆ ಬರುತ್ತೇವೆಂದು ಹೇಳುತ್ತಿದ್ದೇನೆ. ಶ್ರೀಮಾನ್ ವೀರಪ್ಪನವರ ಹತ್ತಿರ ಹೋಗದ ಹಾಗೆ ನಾವೇ ದುಡ್ಡು ಸಂಪಾದನೆ ಮಾಡುವುದಕ್ಕೆ ಮಾರ್ಗ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ ಅಷ್ಟೆ. ಆದುದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಹರಿಜನರ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಹೇಳಬೇಕೆಂಬ ಇಚ್ಛೆ ಇದೆ. ಸರ್ಕಾರಿ ಬಸ್‌ಗಳನ್ನು ನಿಲ್ಲಿಸುವುದು ಬಹಳ ಉತ್ತಮವೆಂದು ಕಾಣುತ್ತದೆ. ಏಕೆಂದರೆ ನಿಮಗೆ ವ್ಯಾಪಾರ ಮಾಡುವುದಕ್ಕೆ ಬರುವುದಿಲ್ಲ. ಖಾಸಗಿಯವರು ನಿಮಗಿಂತ ಕಡಿಮೆ ದರದಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಾರೆ. ಇವರ ಬಸ್ ವ್ಯವಸ್ಥೆ ಚೆನ್ನಾಗಿದೆ. ಸರ್ಕಾರದಲ್ಲಿ ಏನಾಗಿದೆಯೆಂದರೆ ಒಂದು ಬಸ್ ನಡೆಸಬೇಕಾದರೆ ಎಷ್ಟೋ ಸಿಬ್ಬಂದಿಯನ್ನು

ಇಟ್ಟುಕೊಂಡಿದ್ದೀರಿ. ಖಾಸಗಿಯವರು ಬಹಳ ಕಡಮೆ ಸಿಬ್ಬಂದಿಯಲ್ಲಿ ಉತ್ತಮವಾಗಿ ನಡೆಸುತ್ತಿದ್ದೀರಿ. ನಿಮ್ಮ ರೋಡ್ ಟ್ರಾನ್ಸ್‌ಪೋರ್ಟ್ ಬಸ್‌ಗಳನ್ನು ದಯವಿಟ್ಟು ನಿಲ್ಲಿಸಿ, ಖಾಸಗಿಯವರಿಗೆ ಕೊಟ್ಟು ಅವರ ಮೇಲೆ ಬೇಕಾದರೆ ಇನ್ನೂ ಹೆಚ್ಚು ಬಸ್ ತೆರಿಗೆಯನ್ನು ಹಾಕಿ ನಿಮಗೆ ಬೇಕಾದ ಹಣವನ್ನಾದರೂ ಪಡೆಯಲು ಮಾರ್ಗ ಮಾಡಿಕೊಳ್ಳಿ. ಪ್ರತಿಯೊಂದು ವ್ಯವಹಾರದಲ್ಲಿಯೂ ಸರ್ಕಾರವೇ ಕೈ ಹಾಕಿದರೆ ಏನಾಗುತ್ತದೆ ? ರಾಷ್ಟ್ರೀಕರಣ ಮಾಡಿದಾಗ ಆ ಕೆಲಸಗಳಲ್ಲಿ ಸಿವಿಲಿಯನ್ ಅಧಿಕಾರಿಗಳನ್ನು ಹಾಕುತ್ತಿದ್ದೀರಿ. ಸಾರಿಗೆ ಶಾಖೆಗೆಲ್ಲ ಅವರನ್ನು ಹಾಕಿದರೆ ಅವರಿಗೆ ಏನೂ ಗೊತ್ತಾಗುವುದಿಲ್ಲ. ಒಬ್ಬ I.A.S. ಅಧಿಕಾರಿಯನ್ನು ರೋಡ್ ಟ್ರಾನ್ಸ್‌ಪೋರ್ಟ್ ಜನರಲ್ ಮ್ಯಾನೇಜರಾಗಿ ಮಾಡಿದರೆ ಅವರಿಗೆ ಬಸ್ ವ್ಯವಹಾರ ಗೊತ್ತಿರುತ್ತದೆಯೇ ? ಆದುದರಿಂದ ಬಸ್ ವ್ಯವಹಾರವನ್ನು ಖಾಸಗಿಯವರಿಗೆ ಬಿಟ್ಟು ಕೊಟ್ಟು, ಬೇಕಾದರೆ ಹೆಚ್ಚಿಗೆ ಟ್ಯಾಕ್ಸ್ ಹಾಕಿ, ಹೆಚ್ಚು ಆದಾಯ ಬರುವಂತೆ ಮಾಡಿರಿ ಎಂದು ಹೇಳುತ್ತೇನೆ.

ಹರಿಜನ ಗಿರಿಜನರಿಗಾಗಿ ಹೈಸ್ಕೂಲು, ಕಾಲೇಜು, ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಮೀಸಲಿಟ್ಟಿರುವುದು ಶೇಕಡ 18 ಭಾಗ. ಇದುವರೆಗೂ ಪಾಲಿಟೆಕ್ನಿಕ್‌ಗಳಲ್ಲಿ ನಮ್ಮ ಹುಡುಗರು ಓದಲು ಬರುತ್ತಿರಲಿಲ್ಲ. ಇವೊತ್ತು ಅಪ್ಲಿಕೇಷನ್ ಹಾಕಿದರೆ ಅದರಲ್ಲಿ ನೂರಕ್ಕೆ 18 ಜನರನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ನೂರಕ್ಕೆ 25 ರಷ್ಟು ಅಪ್ಲಿಕೇಷನ್‌ಗಳು ಬಂದಿದ್ದರೆ ಉಳಿದುವನ್ನು ಬಿಟ್ಟುಬಿಡುತ್ತಾರೆ. ಹರಿಜನ ಗಿರಿಜನ ವಿದ್ಯಾರ್ಥಿಗಳು ಮುಂದೆ ಬರಬೇಕಾದರೆ ನೂರಕ್ಕೆ 25 ಅಥವಾ 30 ಜನ, ಎಷ್ಟೇ ಆಗಲೀ, ಅರ್ಜಿ ಹಾಕಿರುವವರಿಗೆ ಎಲ್ಲರಿಗೂ ಪಾಲಿಟೆಕ್ನಿಕ್‌ಗಳಲ್ಲಿ ಅವಕಾಶ ಕೊಡಬೇಕು. ಹತ್ತಿಪ್ಪತ್ತು ವರ್ಷಗಳಿಂದ ಪಾಲಿಟೆಕ್ನಿಕ್‌ಗೆ ನಮ್ಮಲ್ಲಿ ಒಬ್ಬ ಹುಡುಗನೂ ಬರುತ್ತಿರಲಿಲ್ಲ. ಒಬ್ಬೊಬ್ಬ ಹುಡುಗರು ಹೆಚ್ಚಾಗಿದ್ದರೂ ಸಹ ಅವರನ್ನು ತೆಗೆದುಕೊಳ್ಳದೆ, ನಿಮಗೆ 18 ಪರ್‌ಸೆಂಟ್ ಮಾತ್ರ ರಿಸರ್ವ್ ಆಗಿದೆ, ಅಷ್ಟು ಸೀಟ್ಸ್ ಕೊಟ್ಟಿದ್ದೇವೆ. ಜಾಸ್ತಿ ಕೊಡುವುದಕ್ಕೆ ಸೀಟುಗಳನ್ನು ಎಲ್ಲಿಂದ ತರೋಣ ಎಂದು ಹೇಳುತ್ತಾರೆ. ನಮ್ಮ ಹುಡುಗರಿಗೆ ಹೆಚ್ಚು ಸ್ಥಾನಗಳು ಸಿಕ್ಕುವಂತೆ ಮಾಡಬೇಕು.

ಸಭಾಪತಿಯವರು.—ತಮಗೆ ಕೊಟ್ಟಿದ್ದ ಕಾಲಾವಕಾಶ ಮುಗಿಯಿತು. ತಾವು ತಮ್ಮ ಭಾಷಣವನ್ನು ಬೇಗನೆ ಪೂರೈಸಬೇಕು.

ಶ್ರೀ ಟಿ. ಹನುಮಯ್ಯ.—ಪಾಲಿಟೆಕ್ನಿಕ್‌ಗಳಲ್ಲಿ ನಿಮ್ನ ವರ್ಗದ ಹುಡುಗರಿಗೆ ಹೆಚ್ಚು ಸ್ಥಾನಗಳು ಸಿಕ್ಕುವಂತೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರು ಪದೇ ಪದೇ ಬೆಲ್ ಹೊಡೆಯುತ್ತಿರುವುದರಿಂದ ಅವರ ಮನಸ್ಸಿಗೂ ಬೇಸರವನ್ನುಂಟು ಮಾಡುವುದು ಸರಿಯಲ್ಲವೆಂದು ನಾನು ನನ್ನ ಭಾಷಣವನ್ನು ಇವೊತ್ತಿಗೆ ಮುಗಿಸುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).— ಸ್ವಾಮಿ. 1961-62ರ ಆಯವ್ಯಯ ಮುಂಗಡ ಪತ್ರವನ್ನೂ ನಮ್ಮ ಮುಂದೆ ಇಡುವಾಗ ಮಾನ್ಯ ಅರ್ಥಸಚಿವರು, ಇಲ್ಲಿಯವರೆಗೂ ಇಟ್ಟಂಥ ಪ್ರತಿವರ್ಷದ ಆಯವ್ಯಯ ಹಾಗೂ ಕೈಕೊಂಡಯೋಜನೆಗಳ ಪರಿಣಾಮವಾಗಿ ಈ ರಾಜ್ಯ ಸುಖೀ ರಾಜ್ಯದ ಬಾಗಿಲಿನಲ್ಲಿದೆ ಎಂದು ತಿಳಿಸಿದ್ದಾರೆ. ನನ್ನ ಮನಸ್ಸಿಗೆ ಒಂದು ಯೋಚನೆಬಂತು. ಪೂಜ್ಯ ಗಾಂಧೀಜಿಯವರು ಅವರ ತ್ಯಾಗ ಬಲದಾನ ಇವುಗಳ ಪರಿಣಾಮವಾಗಿ ಅಪೇಕ್ಷಿಸಿದ ಸುಖೀರಾಜ್ಯ ಈ ರೀತಿಯ ರಾಜ್ಯಾಡಳಿತ ಸುಖೀ ರಾಜ್ಯವಲ್ಲ. ಜನತೆಗೆ ಬೇಕಾಗುವ ಅನ್ನ, ಹೊದಿಯುವ ಬಟ್ಟೆ. ವಾಸಕ್ಕೆ ಯೋಗ್ಯಮನೆ, ಧರ್ಮದ ರಾಜ್ಯಾಡಳಿತ ಇದಕ್ಕಾಗಿ ಪೂಜ್ಯ ಗಾಂಧೀಜಿ ತಪಸ್ಸುಮಾಡಿದರು. ಮಾನ್ಯ ಅರ್ಥಸಚಿವರಿಗೇ ಇದು ಗೊತ್ತು. ಅವರು ಹಳ್ಳಿಯಲ್ಲಿ ಹುಟ್ಟಿದವರು, ಹಳ್ಳಿಯ ಪರಿಚಯವಿರುವವರು, ಹಳ್ಳಿಯ ಜೀವನದವುಟ್ಟ ಇಂದು ಯಾವ ರೀತಿಯಲ್ಲಿದೆಯೆಂದು ತಿಳಿದಿರುವವರು. ಇಂದು ಹಳ್ಳಿಗಾಡಿನಲ್ಲಿ ವಾಸಮಾಡುವ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಬಹುತೇಕಮಂದಿ ರೈತರು ಈ ಸುಖೀರಾಜ್ಯದಿಂದ ಏನು ಪ್ರಯೋಜನವನ್ನು ತೆಗೆದುಕೊಳ್ಳುತ್ತಿದ್ದಾರೆ. ? ನಾನು ಹೇಳುವುದನ್ನು ಮಾನ್ಯ ಅರ್ಥಸಚಿವರು ಅವರ ಅನುಭವದಿಂದಲೇ ಅರಿತು ಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ವ್ಯವಸಾಯದಲ್ಲಿ ತೊಡಗಿರತಕ್ಕ ರೈತ ತನಗೆ ಬೇಸಾಯದ ಕಾಲದಲ್ಲಿ ಉಳುಮೆಗೆ ಬೇಕಾದಂತ ಗುಳವಗ್ಯೈರೆಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಸಕಾಲದಲ್ಲಿ ರೈತನಿಗೆ ಬೇಕಾದ ವ್ಯವಸಾಯದ ಉಪಕರಣಗಳು ದೊರೆಯುತ್ತಿಲ್ಲ. ಸಕಾಲದಲ್ಲಿ ಒದಗಿಸಲು ಸರ್ಕಾರ ಕೂಡ ಅಶಕ್ತವಾಗಿದೆ ಎನ್ನುವುದನ್ನೂ ಮಾನ್ಯ ಸಚಿವರೂ ಒಪ್ಪಿಕೊಳ್ಳುತ್ತಿದ್ದಾರೆ. ರೈತನಿಗೆ ಬೇಕಾದ ಕೃತಕಗೊಬ್ಬರ, ರಸಾಯನಿಕ ಗೊಬ್ಬರ, ಅದು ಬೇಕಾದ ಕಾಲಕ್ಕೆ ದೊರೆಯುತ್ತಿಲ್ಲ. ಕಾಲತೀತವಾದಮೇಲೆ ಬರುತ್ತದೆ. ಸರ್ಕಾರದವರು ನಾನಾಕಾರಣಗಳಿಂದ ತೊಂದರೆಯಾಯಿತು, ಅದರಿಂದ ನಿಧಾನವಾಯಿತು ಎಂದು ಹೇಳುತ್ತಾರೆ. ಬೇಸಾಯವೆಲ್ಲ ಮುಗಿದಮೇಲೆ ಗೊಬ್ಬರ ಬರುವುದು ಮಾನ್ಯ ಸಚಿವರಿಗೆ ಚೆನ್ನಾಗಿ ಅರಿವಾಗಿದೆ. ಹಾಗೆಯೇ ಬೆಳೆಗಳಿಗೆ ತಗಲತಕ್ಕ ಕ್ರಿಮಿಕೀಟಗಳ ವಿಷಯ ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ, ಆ ಪ್ರಾಂತದಲ್ಲಿ ಬಂದಂಥ ಕ್ರಿಮಿಕೀಟಗಳನ್ನು ನಾಶಪಡಿಸುವುದಕ್ಕೆ ಆಯಾ ಇಲಾಖಾಧಿಕಾರಿಗಳು ಅಶಕ್ತರಾಗಿ ಕೆಲಸಮಾಡುತ್ತಿದ್ದಾರೆ. ಅನೇಕ ಕಡೆ ರೈತ ಈ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇಷ್ಟುಮಾತ್ರವಲ್ಲ ಈ ಎಲ್ಲ ಕಷ್ಟಗಳಲ್ಲಿಯೂ ರೈತನು ಬೆಳೆದಂಥ ಧಾನ್ಯವನ್ನು ರೈತನನ್ನು ಶೋಷಣೆಮಾಡಿ, ತನ್ನ ಸ್ವಾರ್ಥಕ್ಕೆಉಪಯೋಗಿಸಿಕೊಳ್ಳುವಂಥ ದಳ್ಳಾಳಿ. ಈ ದಳ್ಳಾಳಿಗಳ ಹಾವಳಿಯನ್ನು ತಪ್ಪಿಸಲು ರೈತನು ಬೆಳೆದಂಥ ಧಾನ್ಯವನ್ನು ಇಟ್ಟುಕೊಳ್ಳತಕ್ಕ ವ್ಯವಸ್ಥೆಯ ಕಡೆ ಈಗತಾನೇ ಹೆಜ್ಜೆ ಇಡುತ್ತಿದ್ದೇವೆ ಅನೇಕರು ರೈತರು ಇಂದು ಬೆಳೆದಂತ ದವಸವನ್ನು, ನಾನಾಕಾರಣಗಳಿಂದಾಗಿ ದಳ್ಳಾಳಿಗಳ ಹಾವಳಿಗೆ ಸಿಕ್ಕಿ ನಾನಾರೀತಿಯ ಕಾರಣಗಳಿಂದ ಬಹು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಹಳ್ಳಿಗಾಡಿನಲ್ಲಿ ವಾಸಮಾಡತಕ್ಕ ಸುಮಾರು ಆರುಸಾವಿರ ಹಳ್ಳಿಯ ಜನಕ್ಕೆ ಇನ್ನೂ ಕುಡಿಯುವ ನೀರಿನ ಬಾವಿಯ ಸೌಕರ್ಯವನ್ನು ಒದಗಿಸಿಲ್ಲ, ಸುಖೀರಾಜ್ಯ ಎಂದು ಬಾಯಿಯಲ್ಲಿ ಮಾತ್ರ ಹೇಳುತ್ತಇದ್ದಾರೆ. ಈ ಆಯವ್ಯಯ ಪಟ್ಟಿಯಲ್ಲಿ ಕೂಲಂಕೂಷವಾಗಿ ನೋಡಿದರೆ ರೈತನಿಗೆ ಸಿಕ್ಕುವ ಸುಖ ಗಗನಕುಸುಮದಂತಿದೆ ಎನ್ನುವುದನ್ನು ಮಾನ್ಯ ಅರ್ಥಮಂತ್ರಿಗಳಾದ ಶ್ರೀ ಮರಿಯಪ್ಪನವರೂ ಕೂಡ ಒಪ್ಪುತ್ತಾರೆಂದು ನಾನು ನಂಬುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಬಡ್ಜೆಟ್ಟಿನಲ್ಲಿ ನೋಡಿದರೆ, ಹಳ್ಳಿ ಜನಕ್ಕೆ ಸಹಾಯ ದೊರಕಿಸುವ ದೃಷ್ಟಿಯಿಂದ ಇಂಜನೀಯರಿಂಗ್ ಕಾಲೇಜು, ವ್ಯವಸಾಯದ ಕಾಲೇಜು ಇದಕ್ಕೆ ಅವಕಾಶ ಕಲ್ಪಿಸಿಲ್ಲ ಇಂಜನೀಯರಿಂಗು ಕಾಲೇಜು, ವ್ಯವಸಾಯದ ಕಾಲೇಜು ಇಂತಹ ಕಾಲೇಜುಗಳನ್ನು ಸ್ಥಾಪನೆ ಮಾಡುವಾಗ ಹಳ್ಳಿಗಾಡಿನ ಜನಕ್ಕೆ ಹೆಚ್ಚು ಸ್ಥಾನಗಳು ದೊರೆಯುವಂತಾಗಬೇಕು. ಖಾಸಗಿಯವರು, ಮುಂದೆ ಬಂದು ದೇಶಪ್ರೇಮವಿರುವವರು ಸಂಘವನ್ನು ಸ್ಥಾಪನೆಮಾಡಿಕೊಂಡು ಈ ಕಾಲೇಜುಗಳನ್ನು ಸ್ಥಾಪನೆಮಾಡಬೇಕು ಎಂದು ಸರಕಾರಕ್ಕೆ ಅರ್ಜಿಹಾಕಿಕೊಂಡರೂ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ, ಮಂಡ್ಯದಲ್ಲಿ ಈ ರೀತಿಯಾದ ಜನತಾಶಿಕ್ಷಣ ಸಂಘವನ್ನು ಸ್ಥಾಪನೆಮಾಡಿ ರಿಜಿಸ್ಟರುಮಾಡಿಸಿ ಸರಕಾರಕ್ಕೆ ಅರ್ಜಿ ಹಾಕಿಕೊಂಡಿದ್ದಾಗ ಸರಕಾರದಲ್ಲಿ ಬೇರೆಯಾವ ಜಿಲ್ಲೆಯವರಿಂದಲೂ ಆಗ ಇಂಜಿನೀಯರಿಂಗ್ ಕಾಲೇಜು ಬೇಕೆಂದು ಅರ್ಜಿ ಕಾಲೇಜಿಗಾಗಿ ಬಂದಿರಲಿಲ್ಲ. ಹಾಗಿದ್ದರೂ ನಮ್ಮ ಇಂಜನೀಯರಿಂಗು ಕಾಲೇಜಿಗಾಗಿ ಅರ್ಜಿ ಮೊದಲು ಬಂದಿಲ್ಲ ಎಂದು ಸರಕಾರ ಅಪದ್ಧವನ್ನು ಹೇಳಿದರೆ ಇದಕ್ಕಿಂತಲೂ ಮುಂದೆ ಹೋಗಿ ಸರಕಾರದ ಧೋರಣೆಯನ್ನು ವಿವರಿಸಲು ಹೋಗುವುದಿಲ್ಲ ಸತ್ಯಾಂಶವನ್ನು ಪರಿಶೀಲಿಸಲು ಈ ಸಭೆಗೇ ಬಿಡುತ್ತೇನೆ ತಾವೇ ಯೋಚನೆಮಾಡಬೇಕು. ಬೇರೆ ಕಡೆಗೆ ಕಾಲೇಜುಗಳನ್ನು ಕೊಟ್ಟರು ಎಂದು ನಾನು ಅಸೂಯೆಪಡುವುದಿಲ್ಲ. ಸಂಘ ಸಂಸ್ಥೆಗಳನ್ನು ಮಾಡಿಕೊಂಡು ವಿದ್ಯಾಭ್ಯಾಸ ಸೌಕರ್ಯವನ್ನು

ದೊರಕಿಸಿಕೊಡಬೇಕು, ಬೆಳೆಸಬೇಕು ಎನ್ನುವ ಒಂದು ಮನಸ್ಸನ್ನು ಇಟ್ಟುಕೊಂಡು ಮಂಡ್ಯದಲ್ಲಿ ಈ ಇಂಜಿನೀಯರಿಂಗ್ ಕಾಲೇಜನ್ನು ಮಾಡಬೇಕೆಂದು ಕೇಳುತ್ತಿದ್ದುದು ಮಾನ್ಯ ಆರ್ಥಿಕ ಮಂತ್ರಿಗಳಾದ ಶ್ರೀ ಮರಿಯಪ್ಪನವರಿಗೂ ಗೊತ್ತು. ಕಾಲೇಜು ನಡೆಸಲು ಇದಕ್ಕಾಗಿ ಸರಕಾರದವರು ಏನೇನು ನಿಯಮಗಳನ್ನು ಹಾಕಿದ್ದರೂ ಅದನ್ನೆಲ್ಲಾ ಪೂರೈಸಲು ಸಿದ್ಧವಾಗಿದ್ದರು ರಾಜಕೀಯ ಬಿನ್ನಾಭಿಪ್ರಾಯವನ್ನು ದೊಡ್ಡದು ಮಾಡಿಕೊಂಡು ದೇಶಪ್ರೇಮ ಹಾಗೂ ಜಿಲ್ಲಾಪ್ರೇಮವನ್ನು ಕಡೆಗಾಣಿಸಿ ಮಂಡ್ಯಕ್ಕೆ ಇಂಜಿನೀಯರಿಂಗ್ ಕಾಲೇಜು ದೊರಕುವುದನ್ನು ತಪ್ಪಿಸಿದ ಅಪಕೀರ್ತಿ ಮಾನ್ಯ ಮರಿಯಪ್ಪನವರ ಪಾಲಿಗೆ ಸೇರಿದ್ದು. ಮಾನ್ಯ ಅರ್ಥಸಚಿವರು ದೊಡ್ಡಮನಸ್ಸುಮಾಡಿ ಜನ್ಮತಾಳಿದ ಜಿಲ್ಲೆಗೆ ಸಹಾಯಮಾಡಲು ಮುಂದೆ ಬಂದಿದ್ದರೆ ನಿಜವಾಗಿಯೂ ನಮ್ಮ ಜಿಲ್ಲೆಯಲ್ಲಿನ ಜನ ಮತ್ತು ಮುಂದೆ ಈ ಕಾಲೇಜಿನಲ್ಲಿ ಓದುವ ಮಕ್ಕಳೆಲ್ಲ ಮಾನ್ಯಅರ್ಥಸಚಿವರಿಗೆ ಅವರ ಕೃತಜ್ಞತೆಯನ್ನು ಅರ್ಪಿಸುತ್ತಿದ್ದರು. ಮುಂದಾದರೂ ರಾಜಕೀಯ ಅಡ್ಡಿಗಳೇನೇ ಬರಲಿ ಅದನ್ನು ಯೋಚನೆಮಾಡದೆ ಕಾಲೇಜುಗಳನ್ನು ದೊರಕಿಸಿಕೊಡುವಾಗ ನಮ್ಮ ಜಿಲ್ಲೆಯಲ್ಲಿಯೂ ಕಾಲೇಜನ್ನು ದೊರಕಿಸುವ ವಿಚಾರದಲ್ಲಿ ಮಾನ್ಯ ಸಚಿವರು ತೀವ್ರವಾಗಿ ಯೋಚನೆಮಾಡಿ ದೊರಕಿಸಿಕೊಡುತ್ತಾರೆಂದು ಭಾವಿಸುತ್ತೇನೆ. ಈಗಾಗಲೇ ವಾಗ್ದಾನ ಮಾಡಿರುವುದು ಸೇರಿ ನಾಲ್ಕು ಲಕ್ಷ ರೂ. ಬಂದಂತಾಗಿದೆ. ಸರ್ಕಾರ ಇಂಜಿನಿಯರಿಂಗ್ ಕಾಲೇಜು ಕೊಡಲು ಭರವಸೆಕೊಟ್ಟರೆ, ಸರ್ಕಾರ ಗೊತ್ತುಮಾಡಿರುವ ಎಲ್ಲಾ ಷರತ್ತುಗಳನ್ನು ಪೂರೈಸುವ ಭರವಸೆ ನೀಡುತ್ತೇನೆ. ಸರಕಾರ ಭರವಸೆ ಕೊಟ್ಟರೆ, ಇಷ್ಟೊತ್ತು ಎಲ್ಲರಮನೆಯಲ್ಲಿಯೂ ಹೋಗಿ ಭಿಕ್ಷವನ್ನಾದರೂ ಮಾಡಿ ತರಲು ತಯಾರಾಗಿದ್ದೇವೆ. ಮಾನ್ಯ ಅರ್ಥ ಸಚಿವರು ಮುಂದೆಯಾದರೂ ಈ ಕಾಲೇಜನ್ನು ದೊರಕಿಸಿಕೊಡಲು ಅಡ್ಡಿ ಆತಂಕಗಳನ್ನು ತರಬಾರದು ಎಂದು ನಾನು ಹೇಳುತ್ತೇನೆ.

ಈಗ ಭೂಮಿ ಕಂದಾಯದಮೇಲೆ ಸರ್‌ಚಾರ್ಜು ಹಾಕಬೇಕೆಂದು ಹೇಳುವ ಮಾನ್ಯ ಅರ್ಥಸಚಿವರೂ ತಮ್ಮ 1953ನೇ ಇಸವಿಯಲ್ಲಿ ಆಗ ಸರ್ಕಾರ ಮಂಡಿಸಿದ ಆಯವ್ಯಯ ಪಟ್ಟಿಯ ಮೇಲೆ ಭಾಷಣಮಾಡುತ್ತಾ ಈಗ ಲೋಕೋಪಯೋಗಿ ಖಾತೆಯನ್ನು ವಹಿಸಿರತಕ್ಕ ಶ್ರೀಮಾನ್ ವೀರಣ್ಣಗೌಡರು ಹೇಳಿದ ವಿಷಯಗಳನ್ನು ಇಲ್ಲಿ ಸಭೆಯ ಅವಗಾಹನೆಗೆ ತರಬೇಕೆಂದಿದ್ದೆ. ಆದರೆ ಹೆಚ್ಚಿನ ಕಾಲಾವಕಾಶವಿಲ್ಲ. ಅವರು ಅಲ್ಲಿ ಆಗ ಹೇಳಿದ್ದು ಕಂದಾಯವನ್ನು ರೈತನ ಮೇಲೆ ಹೆಚ್ಚಿಸಿದ್ದೇ ಆದರೆ ಅಂತಹ ಸರಕಾರವನ್ನು ಧೂಳಿಪಟ ಮಾಡಬೇಕು ಎಂದು ಹೇಳಿದರು. ನಮ್ಮ ಆರ್ಥಿಕ ಸಚಿವರಾದ ಶ್ರೀಮಾನ್ ಮರಿಯಪ್ಪನವರು ಪ್ಲಾನಿಂಗ್ ಕಮಿಷನ್ನಿನವರು ರೈತನ ಮೇಲೆ ಯಾವತರಹದ ಹೊರೆಯನ್ನು ಹಾಕಬೇಕಾದರೂ ಅವನಿಗೆ ಯಾವರೀತಿಯಾದ ನೋವೂ ಆಗುವಂತೆ ಕಂದಾಯ ಹಾಕುವಕಡೆಗೆ ಹೋಗಬಾರದು. ದೇಶಕ್ಕೆ ಆಹಾರವನ್ನು ಉತ್ಪನ್ನಮಾಡುವಂತಹ ರೈತನ ವಿಚಾರದಲ್ಲಿ ಬಹಳ ಎಚ್ಚರಿಕೆ ಇರಬೇಕು ಎಂದು ಹೇಳಿದವರು, ಇಷ್ಟೊತ್ತು ನೀವು ಕಂದಾಯ ಹಾಕಲು ಸಿದ್ಧವಾಗಿದ್ದೀರಿ. ಯಾರು ಏನು ಬೇಕಾದರೂ ಹೇಳಲಿ ರೈತನ ಭೂಮಿಯಮೇಲೆ ಕಂದಾಯ ಹಾಕುವುದು ನ್ಯಾಯವಲ್ಲ ಎಂದು ಹೇಳಿದಂತಹ ಮಾನ್ಯ ಆರ್ಥಿಕ ಸಚಿವರು ಕೂಡ ಅವರೂ ಹಳ್ಳಿಯವರಾಗಿ ಈಗ ಸರಕಾರ ನಡೆಸುತ್ತಿರುವ ಕಾಲದಲ್ಲಿ, ನಾನು ಮೊದಲೇ ಹೇಳಿದಹಾಗೆ, ರೈತನಿಗೆ, ದೊರೆಯುತ್ತಿರುವ ಅನುಕೂಲಗಳ ಕಡೆ ಗಮನವಿತ್ತು ಸಕಾಲದಲ್ಲಿ ಸೌಲಭ್ಯ ದೊರಕಿಸಲು ಪ್ರಯತ್ನಮಾಡದೆ ವಾಸ್ತವವಾಗಿ ಅನಾನುಕೂಲಗಳನ್ನು ಮಾಡಿ ಈರೀತಿ ಕಂದಾಯ ಹೇರತಕ್ಕದ್ದು ಎಷ್ಟರಮಟ್ಟಿಗೂ ಸಾಧುವಾದುದಲ್ಲ. ಇಂದಿನ ದಿವಸ ನಮ್ಮ ಬೆಂಗಳೂರಿನಂತಹ ದೊಡ್ಡ ಪಟ್ಟಣಗಳಲ್ಲಿ ಕೆಲವು ಮನೆಗಳಿವೆ. ಆ ಮನೆಗಳನ್ನು ನೋಡುವಾಗ, ನಾವು ಈ ಲೋಕದಲ್ಲಿದ್ದೇವೋ ಅಥವಾ ಸ್ವರ್ಗದಲ್ಲಿದ್ದೇವೋ ಎನ್ನುವಂತೆ ಕಾಣುತ್ತದೆ ಅಲ್ಲಿನ ರತ್ನಗಂಬಳಿಗಳು, ಮತ್ತು ಇನ್ನಿತರ ಅಲಂಕಾರ ಸಾಮಗ್ರಿಗಳು, ಇವುಗಳಿಂದ ಕೂಡಿರುವ ಎಷ್ಟೋ ಐಶ್ವರ್ಯವಂತರಾದ ಜನ ಬೇಕಾದಷ್ಟಿದ್ದಾರೆ. ಇಂತಹ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ವರಿರುವಾಗ ಸರಕಾರ ಅಂತಹ ಕೋಟ್ಯಾದೀಶ್ವರರ ಮೇಲೆ ದುಭಾರಿ ತೆರಿಗೆ ಹಾಕಿ ಸರ್ಕಾರದ ಬೊಕ್ಕಸ ತುಂಬಲು ಅಂಜುತ್ತಿದ್ದಾರೆ ? ಅಥವಾ ಅಂತಹ ಐಶ್ವರ್ಯವಂತರ ದಾಕ್ಷಿಣ್ಯಕ್ಕೆ ಸಿಕ್ಕಿ ಹೇಚಾಡುತ್ತಿದ್ದಾರೋ ಅರ್ಥವಾಗದೇ ಇದೆ ಇತರ ರಕ್ತವನ್ನು ಹೀರತಕ್ಕ ಈ ಜನರ ಮೇಲೆ ತೆರಿಗೆಯನ್ನು ಹಾಕಿದರೆ ತಪ್ಪಾಗುವುದಿಲ್ಲ.

ಇವರ ಮೇಲೆ ಹಾಕಲು ಯಾವ ದಾಕ್ಷಿಣ್ಯವಿದೆಯೋ ಅಥವಾ ಇವರನ್ನೂ ಮಾತನಾಡಿಸಲು ಶಕ್ತಿ ಇಲ್ಲವೋ ಏನೋ ಇವರನ್ನು ಬಿಟ್ಟು ರೈತನ ಮೇಲೆ ಸರ್‌ಚಾರ್ಜನ್ನು ಹಾಕುವುದು ಖಂಡಿತಾ ಸಾಧುವಾದುದಲ್ಲ ಎನ್ನುವುದನ್ನು ಪುನರ್ವಿಮರ್ಶೆ ಮಾಡಬೇಕೆಂದು ನಾನು ಸರಕಾರದ ಗಮನಕ್ಕೆ ತರುತ್ತೇನೆ.

ಮತ್ತೊಂದು ಕಣ್ಣೀರು ತರುವಂತಹ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಪೂಜ್ಯ ಮಹಾತ್ಮ ಗಾಂಧಿಯವರು ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿದಂತೆ ಇತ್ತೀಚೆಗೆ ಗ್ರಾಮಪಂಚಾಯಿತ್ತಿಗಳ ಚುನಾವಣೆಮಾಡುವ ಕಾಲದಲ್ಲಿ ಹೊಸ ಕಾಯಿದೆಗೆ ಸಕ್ಕಂತೆ ಗ್ರಾಮಗಳನ್ನು ಗ್ರೂಪುಗಳಾಗಿ ವಿಂಗಡಿಸುವಾಗ ಸ್ಥಳದ ಅಧಿಕಾರಿಗಳು ಕಳುಹಿಸಿದ ಪಟ್ಟಿಯಲ್ಲಿ ಶೇಕಡ 75 ಭಾಗವನ್ನು ಸರ್ಕಾರದ ಮಟ್ಟದಲ್ಲಿ ಬದಲಾವಣೆ ಮಾಡಿ ಒಂದಕ್ಕೊಂದು ಸಂಬಂಧವಿಲ್ಲದ ರೀತಿ ಗ್ರೂಪುಗಳನ್ನು ವಿಂಗಡಿಸಿ ಸ್ಥಳದಲ್ಲಿ ಶಾಂತಿಗೆ ದಕ್ಕೆ ಬರುವಂತೆ ಆಡಳಿತ ನಡೆಸಿದ ಅಪಕೀರ್ತಿ ಇಂದಿನ ಸ್ಥಳೀಯ ಸಂಸ್ಥೆ ಸಚಿವರ ಪಾಲಿಗೆ ಸೇರಿದುದು. ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಪೂಜ್ಯ ಗಾಂಧಿಯವರು ಹೇಳಿದಂತೆ ಅದನ್ನು ಜಾರಿಗೆ ತರುತ್ತೇವೆ ಎಂದು ಸರಕಾರದವರು ಈಗ ಗ್ರಾಮಪಂಚಾಯಿತಿ ಆಡಳಿತ ಜಾರಿಗೆ ತಂದರು, ಆಡಳಿತ ವಿಕೇಂದ್ರೀಕರಣವಾಗುವ ಮಾರ್ಗ ಗ್ರಾಮಪಂಚಾಯಿತ್ತಿಗಳ ಮೂಲ ಸಾಧ್ಯವೆಂದು ಕಂಡು ಅದನ್ನು ಜಾರಿಗೆ ತರುವಾಗ ಶಾಂತಿಗೆ ದಕ್ಕೆ ಉಂಟಾಗದ ರೀತಿ ಗ್ರೂಪುಗಳನ್ನು ವಿಂಗಡಿಸಬೇಕಾದ ಹೊಣೆ ಸರ್ಕಾರದ ಕೈಯಲ್ಲಿತ್ತು ಆ ಹೊಣೆಗಾರಿಕೆಯನ್ನು ಹೊತ್ತಿದ್ದು ವಯೋವೃದ್ಧರಾದ ಮಾನ್ಯ ಸುಬ್ರಹ್ಮಣ್ಯರವರು ವಯಸ್ಸಿಗ ಸ್ವಲ್ಪವೂ ಬೆಲೆಕೊಡದೆ ತನ್ನ ಸ್ಥಾನದ ಉಳಿವಿಗೆ ಸಹಾಯ ಮಾಡುವ ಕೆಲವು ದೇಶಾಭಿಮಾನರ ಹಿತಜನತೆಯ ಮಾತಿಗೆ ಕಿವಿಗೊಟ್ಟು ಇಂದು ಸ್ಥಳದ ಅಧಿಕಾರಿಗಳು ಕಳುಹಿಸಿದ ಪಟ್ಟಿಯಲ್ಲಿ ಶೇಕಡಾ 75 ರಷ್ಟನ್ನು ಬದಲಾಯಿಸಿದ್ದಾರೆ ಸ್ವಾಮಿ, ಇಂದು ಹಳ್ಳಿಗಾಡಿನ ಜನತೆಯಲ್ಲಿ ದ್ವೇಶ. ಅಸೂಯೆ, ಪಾರ್ಟಿ ವೈಶಮ್ಯ. ಇವುಗಳಿಲ್ಲದ ಊರುಗಳೇ ಅತಿ ವಿರಳ ಹೀಗಿರುವಾಗ ಬಹಳ ಎಚ್ಚರಿಕೆಯಿಂದ ಗ್ರಾಮಾಂತರ ಜನರ ಶಾಂತಿ ಕೆಡದಂತೆ ಗ್ರಾಮಗಳನ್ನು ಗ್ರೂಪುಗಳಾಗಿ ವಿಂಗಡಿಸಿ ಹೊಸ ಹೆಜ್ಜೆ ಇಟ್ಟರು ಆಡಳಿತ ವಿಕೇಂದ್ರೀಕರಣ ನೀತಿ ಯಶಸ್ವಿಯಾಗಲು ಪ್ರಯತ್ನಿಸಬೇಕಾಗಿತ್ತು. ಮಾನ್ಯ ಸ್ಥಳೀಯ ಸಂಸ್ಥೆ ಸಚಿವರಿಗೆ ದೇಶಪ್ರೇಮಕ್ಕಿಂತಲೂ ರಾಜಕೀಯ ಭಿನ್ನತೆ ದೊಡ್ಡದು ಮಾಡಿ ಇಂದು ಮಂಡ್ಯ ತಾಲ್ಲೂಕಿನ ಗ್ರೂಪುಗಳ ವಿಷಯದಲ್ಲಿ ಮಹದಪರಾಧ ಮಾಡಿದ್ದಾರೆ ಹಳ್ಳಿಗಳಲ್ಲಿ ಪಾರ್ಟಿಗಳಿರತಕ್ಕ ಕಾಲದಲ್ಲಿ ನಮ್ಮ ಯಾವದೇ ತೀರ್ಮಾನ ವೈಶಮ್ಯವನ್ನು ಹೆಚ್ಚಿಸುವಂತಿರಬಾರದು. ಶಾಂತಿಯ ಕಡೆ ಕರೆದೊಯ್ಯುವಂತಿರಬೇಕು ಎನ್ನುವುದನ್ನು ಯೋಚನೆ ಮಾಡಿಕೊಂಡು ಯಾರಿಗೂ ಯಾವ ವಿಧವಾದ ದೋಷವಿಲ್ಲದ ರೀತಿಯಲ್ಲಿ ಈ ಗ್ರೂಪುಗಳನ್ನು ವಿಂಗಡಿಸಬೇಕು. ಇಂದು ಏನು ಮಾಡಿದ್ದಾರೆಂದರೆ, ತಮಗ ಯಾರು ಬೇಕಾದವರು, ತಮ್ಮನ್ನೇ ಯಾರು ಹಿಂಬಾಲಿಸುತ್ತಿದ್ದಾರೋ ಅಂತಹವರಿಗೇ ಸಹಾಯ ಮಾಡುವುದನ್ನು ಮನಸ್ಸಿನಲ್ಲಿಟ್ಟು ದೇಶಪ್ರೇಮವನ್ನ ಬದಿಗೊತ್ತಿದ್ದಾರೆ ಮಾನ್ಯ ಸ್ಥಳೀಯ ಸಂಸ್ಥೆ ಸಚಿವರು 2 ಫರ್ಲಾಂಗು ದೂರದಲ್ಲಿ ಎರಡು ಗ್ರಾಮಗಳೂ ಸೇರಿ ಸ್ಕೂಲುಗಳನ್ನು ಕಟ್ಟಿಕೊಂಡು ಇದ್ದರೂ ಈ ಎರಡು ಗ್ರಾಮಗಳನ್ನೂ ತೆಗೆದು ಒಂದನ್ನು 5 ಮೈಲಿ ದೂರಕ್ಕೆ ಇನ್ನೊಂದನ್ನು ಎರಡು ಮೈಲಿ ದೂರಕ್ಕೆ

ಬದಲಾವಣೆ ಮಾಡಿರುವುದನ್ನು ಸಚಿವರ ಗಮನಕ್ಕೆ ತಂದಾಗ ಅಂತಹುದು ಏನಾದರೂ ಇದ್ದರೆ ತೀವ್ರವಾಗಿ ಯೋಚನೆ ಮಾಡಿ ಸರಿಪಡಿಸುತ್ತೇನೆ ಎಂದು ಹೇಳಿದರು. ಇವರೆವಿಗೂ ಅನೇಕ ಸಾರಿ ಮಂಡ್ಯಕ್ಕೆ ಬಂದರೂ ನಾನು ಗಮನಕ್ಕೆ ತಂದ ವಿಷಯದ ಸತ್ಯಾಂಶವನ್ನು ಪರಿಶೀಲಿಸುವ ಮನಸ್ಸು ಅವರಿಗೆ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದರೂ ಬಂದರೆ ಅವರ ಸರ್ಕಾರದಲ್ಲಿ ಸ್ಥಳೀಯ ಸಂಸ್ಥೆ ಖಾತೆ ವಹಿಸಿಕೊಂಡಿರುವ ಸಚಿವರ ಆಡಳಿತ ವೈಖರಿಯನ್ನು ತೋರಿಸಲು ಅವಕಾಶವಾಗುತ್ತದೆ. ದಯಮಾಡಿ ಒಮ್ಮೆ ಭೇಟಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೋರುತ್ತೇನೆ. ಒಂದು ಗ್ರಾಮದಲ್ಲಿ ದೇವಸ್ಥಾನದ ಮುಂಬಾಗದಲ್ಲಿ ಹಿಡುವಳಿ ಪ್ರದೇಶವನ್ನು ಅಕ್ರಮ್ರಾಕ್ಮಡಿಕೊಡಬೇಕೆಂದು ಕೇಳಿದಾಗ ಗ್ರಾಮಕ್ಕೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಿ ಈಗ ದೇವಸ್ಥಾನಕ್ಕಿರುವ ಜಾಗ ಸಾಕು ಅಕ್ರಮ್ರಾಕ್ಮಡಿಕೊಳ್ಳಬೇಕಾಗಿಲ್ಲವೆಂದು ಆರ್ಡರ್ ಮಾಡಿದರು. ಹದಿನೈದು ದಿನಗಳಾದ ಮೇಲೆ ತಮ್ಮ ಹಿಂಬಾಲಕರ ಮಾತಿಗೆ ಕಿವಿ ಕೊಟ್ಟು ಆ ಜಮೀನನ್ನು ಅಕ್ರಮ್ರು ಮಾಡಬೇಡಿ ಎಂದು ಪುನಃ ಆರ್ಡರು ಕಳುಹಿಸಿದರು. ಇದು ಹೇಗೆ, ನ್ಯಾಯವೇ ಎನ್ನುವುದನ್ನು ತಾವು ನೋಡಬೇಕು. ಆದ್ದರಿಂದ ಇನ್ನು ಮುಂದಾದರೂ ಇಂತಹ ಅವ್ಯವಸ್ಥೆಗೆ ಕಾರಣವಿಲ್ಲದ ರೀತಿಯಲ್ಲಿ ಹಳ್ಳಿಗಾಡಿನಲ್ಲಿರತಕ್ಕ ಜನತೆಗೆ ಬೇಕಾದ ಸೌಕರ್ಯಗಳು ಅವರ ಮನೆ ಬಾಗಿಲಿಗೆ ಸೇರುವುದಕ್ಕೆ ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ನಾವೆಲ್ಲರೂ ಮಾಡಬೇಕು. ಸರ್ಕಾರದವರೂ ಕೂಡ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಸಚಿವರು ಗ್ರಾಮಾಂತರ ಅಭಿವೃದ್ಧಿಗೆ ಏನೊಂದು ಹಣವನ್ನು ದೊರಕಿಸಿದ್ದಾರೆಯೋ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸುವ ಬಗ್ಗೆ ಸರ್ಕಾರದವರು ಬಹಳ ಎಚ್ಚರಿಕೆಯಿಂದ ಹಾಲಿಇರುವುದನ್ನು ಬದಲಾವಣೆ ಮಾಡಿ ಹೊಸಬರನ್ನು ನೇಮಿಸಿಕೊಳ್ಳಬೇಕು. ಫ್ರಮ್ ಅಂಡ್ ಟು ರಿಜಿಸ್ಟರ್‌ನಿಂದ ಹಿಡಿದು ಎಲ್ಲಾ ಕಾಗದ ಪತ್ರಗಳನ್ನು ಅವರು ಬರೆಯಬೇಕು. ಮುಖ್ಯವಾಗಿ ಗ್ರಾಮಪಂಚಾಯಿತಿಗಳಲ್ಲಿ ಎಷ್ಟು ಜನ ಸೆಕ್ರಟರಿಗಳು ಎಲ್ಲವನ್ನೂ ಅರಿತು ಶ್ರದ್ಧೆಯಿಂದ ಕೆಲಸ ಮಾಡಬಲ್ಲರು ಅವರಲ್ಲಿ ನಿಜವಾಗಿ ದಕ್ಷತೆ ಇದೆಯೇ ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಏಕೆಂದರೆ ಇವತ್ತಿನ ದಿವಸ 2 ಕೋಟಿ ಜನತೆಯಲ್ಲಿ ಜ್ಞಾನವನ್ನುಂಟುಮಾಡಿ ಗ್ರಾಮಾಡಳಿತದ ಮೂಲಕ ಆಡಳಿತ ವಿಕೇಂದ್ರೀಕರಣದ ನಿಲುವು ಜಯಪ್ರದವಾಗುವಂತೆ ಮಾಡಬೇಕಾದರೆ ಸರ್ಕಾರದವರು ಗ್ರಾಮರಾಜ್ಯಸ್ಥಾಪನೆ ಮಾಡುವ ವಿಷಯದಲ್ಲಿ ದಕ್ಷ ಕಾರ್ಯದರ್ಶಿಗಳನ್ನು ನೇಮಕ ಮಾಡಬೇಕು ಬಹಳ ಎಚ್ಚರಿಕೆಯಿಂದ ಮಾಡಬೇಕಾಗಿದೆ. ಆದ್ದರಿಂದ ಮುಖ್ಯಮಂತ್ರಿಗಳು ಗ್ರಾಮಾಭಿವೃದ್ಧಿ ಬಗ್ಗೆ ಗ್ರಾಮಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದ ಕಾರ್ಯದರ್ಶಿಗಳನ್ನು ನೇಮಿಸಲು ಮನಸ್ಸು ಮಾಡಬೇಕು. ಒಂದುವೇಳೆ ಏನಾದರೂ ಲೋಪದೋಷಗಳೇನಾದರೂ ಇದ್ದಲ್ಲಿ ಸರಿಪಡಿಸಬೇಕೆಂದು ನಾನು ತಿಳಿಸುತ್ತೇನೆ.

ಇನ್ನು ಆರೋಗ್ಯಸಚಿವರು ಈ ವರ್ಷ ತಮ್ಮ ಆರೋಗ್ಯಖಾತೆಗೆ ಹೆಚ್ಚಾಗಿ ಹಣ ಒದಗಿಸಿ ಕೊಂಡಿದ್ದಾರೆ. ಈಗಾಗಲೇ ಮೊದಲನೇ ಪಾಂಚವಾರ್ಷಿಕ ಯೋಜನೆ ಮುಗಿಯಿತು. ಎರಡನೆ ಪಾಂಚವಾರ್ಷಿಕ ಯೋಜನೆಯೂ ಕೂಡ ಮುಗಿಯುತ್ತಾ ಬಂತು. ಈ ಕಾಲದಲ್ಲಿ ಎಷ್ಟು ಬೇಕಾದರೂ ಆಸ್ಪತ್ರೆಗಳನ್ನು ಕಟ್ಟಿಸುತ್ತೇವೆ. ಮತ್ತು ಇರತಕ್ಕ ಆಸ್ಪತ್ರೆಗಳನ್ನು ಉತ್ತಮಮಟ್ಟಕ್ಕೆ ತರುತ್ತೇವೆಂದು ಹಿಂದೆಯೇ ಹೇಳಿದ್ದರಿ. ಈಗ ಜಿಲ್ಲಾ ಆಸ್ಪತ್ರೆಗಳಾದರೂ ಉನ್ನತಮಟ್ಟದಲ್ಲಿದೆಯೋ ಎಂದು ನೋಡಿದ್ದೇ ಆದರೆ ಈಗ್ಗೆ 10 ವರ್ಷಗಳಿಂದಲೂ ಅಲ್ಲ ಹಿಂದೆ ಅವರು ಯಾವ ರೀತಿಯಲ್ಲಿ, ಯಾವ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದರೋ ಇವತ್ತೂ ಅದೇ ಮಟ್ಟದಲ್ಲಿದೆ ಎಂದು ಹೇಳಿದರೆ ಅದೇನೂ ತಪ್ಪಾಗಿರಲಾರದು. ಬರೀ ತಿಗಣೆಗಳು ಸೊಳ್ಳೆಗಳು ಅಲ್ಲಿ ಹೆಚ್ಚು ಹೊಸದಾಗಿ ಆಸ್ಪತ್ರೆಗಳನ್ನು ಬಡಾವಣೆ ಮಾಡಿದರೆ ಒಳ್ಳೇದು. ನಾನು ಅದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಾ ಇಲ್ಲ. ಎಲ್ಲಾ ಮಂತ್ರಿಗಳು ಪ್ರೋಗ್ರಾಮನ್ನು ಕೊಡುತ್ತಾರೋ ಅಲ್ಲಿಗೆ ಸರ್‌ಪ್ರೈಜ್ ವಿಸಿಟ್ ಮಾಡಬೇಕು.

ಡಾ. ಕೆ. ಕೆ. ಹೆಗ್ಡೆ.—ಮಂಡ್ಯ ಆಸ್ಪತ್ರೆಗೆ ನಾನು ಹೋದುದು ತಮಗೆ ಗೊತ್ತಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ದೇಶದಲ್ಲಿ ಯಾವನಾದರೂ ಒಬ್ಬ ರೋಗಿ ಚಿಕಿತ್ಸೆ ಪಡೆಯಬೇಕಾದರೆ ಮೈಸೂರು ಆಸ್ಪತ್ರೆ ಅಥವಾ ಬೆಂಗಳೂರು ಆಸ್ಪತ್ರೆಗೇ ಹೋಗಬೇಕು ಎನ್ನುವ ಅಭಿಪ್ರಾಯ ಹೋಗಬೇಕು. ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯೂ ಎಲ್ಲ ವೈದ್ಯಕೀಯ ಸಹಾಯವನ್ನು ಅಲ್ಲಿಯವರಿಗೆ ಆಯಾ ಜಿಲ್ಲೆಯಲ್ಲಿಯೇ ಒದಗಿಸುವ ಮಟ್ಟಕ್ಕೆ ಬರಬೇಕು. ಅದಕ್ಕೆ ತಕ್ಕ ಸೌಕರ್ಯವನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಎಲ್ಲ ಕಡೆಯಿಂದಲೂ ರೋಗಿಗಳು ಮೈಸೂರು ಅಥವಾ ಬೆಂಗಳೂರಿಗೇ ಹೋಗುವ ಪದ್ಧತಿಯನ್ನು ನಿಲ್ಲಿಸಬೇಕು. ಎಷ್ಟು ಜನ ಆ ರೀತಿ ಅನುಕೂಲವಾಗಿರುತ್ತಾರೆಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು. ಕೇವಲ ಶ್ರೀಮಂತರೇ ಹೊರತು ಬಡವರಿಗೆ ಇದು ಸಾಧ್ಯವಾಗದು. ಆದ್ದರಿಂದ ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಆಸ್ಪತ್ರೆಗಳು ತಮ್ಮ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಅಧ್ಯಕ್ಷರನ್ನೂ ಸಹ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. CHAIRMAN.—The House will now rise and meet again tomorrow at 1 P. M.

The House adjourned at Five Minutes Past Six of the Clock to meet again at one of the Clock on Tuesday, the 28th March 1961.